ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೫೫
ವಿಚಾರ ಸಾಹಿತ್ಯಮಾಲೆ – ೬೮
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಸಂಸ್ಕೃತ ಮತ್ತು ವಿಜ್ಞಾನ

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಸಂಸ್ಕೃತ ಮತ್ತು ವಿಜ್ಞಾನ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧

ಮೂಲ
ಡಾ. ರಾಜಾ ರಾಮಣ್ಣ

ಅನುವಾದ
ಡಾ. ಎ. ವಿ. ನರಸಿಂಹಮೂರ್ತಿ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Samskruta Mattu Vignaana: Kannada translation of *Sanskrit and Science* : **Dr. Raja Ramanna;** Kannada translation by **Dr. A. V. Narasimhamurthy;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxiv + 40. Price : Rs. 10/-

ಮುದ್ರಣ : ೨೦೧೩
ಪುಟಗಳು : xxiv + ೪೦
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

'ಕನಕದಾಸರ ಕೃತಿ'ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಡಾ. ರಾಜಾರಾಮಣ್ಣ ಅವರ *Sanskrit and Science* ಎಂಬ ಕೃತಿಯ ಕನ್ನಡ ಅನುವಾದ. ಇದನ್ನು 'ಸಂಸ್ಕೃತ ಮತ್ತು ವಿಜ್ಞಾನ' ಎಂಬ ಹೆಸರಿನಲ್ಲಿ ಡಾ. ಎ. ವಿ. ನರಸಿಂಹಮೂರ್ತಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಮುನ್ನುಡಿ

ಖ್ಯಾತಿವೆತ್ತ ಅಣುವಿಜ್ಞಾನಿ ಡಾ. ರಾಜಾ ರಾಮಣ್ಣನವರು ಬರೆದಿರುವ 'ಸಂಸ್ಕೃತ ಅಂಡ್ ಸೈನ್ಸ್' ಎನ್ನುವ ಪುಟ್ಟ ಪುಸ್ತಕವನ್ನು ಭಾರತೀಯ ವಿದ್ಯಾಭವನ ಹೊರತಂದಿರುವುದು ನನಗೆ ಸಂತಸ ತಂದಿದೆ. ಹೋದ ವರ್ಷ ಡಾ. ರಾಜಾ ರಾಮಣ್ಣನವರು ಭಾರತೀಯ ವಿದ್ಯಾಭವನದ ಆಶ್ರಯದಲ್ಲಿ ನೀಡಿದ ಉಪನ್ಯಾಸದ ವಸ್ತುವೇ ಇದು. ಆ ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸುವ ಸುಯೋಗ ನನ್ನದಾಗಿತ್ತು. ಈ ಉಪನ್ಯಾಸವು ಅಲ್ಲಿ ಹಾಜರಿದ್ದ ಅನೇಕರ ಮನಸ್ಸಿನ ಮೇಲೆ ಉತ್ತಮ ಪರಿಣಾಮ ಬೀರಿತು. ಸಂಸ್ಕೃತ ಭಾಷೆಯು ಧಾರ್ಮಿಕ ಮತ್ತು ತತ್ವಶಾಸ್ತ್ರದ ವಿಷಯಗಳನ್ನು ತಿಳಿಸುವ ಉತ್ತಮ ಸಾಧನವೆಂದು ತಿಳಿದಿದ್ದ ಅನೇಕರಿಗೆ ಇದು ಅಷ್ಟೇ ಸಮರ್ಥವಾಗಿ ಅತಿ ಸೂಕ್ಷ್ಮ ಕ್ಲಿಷ್ಟ ಗಣಿತಶಾಸ್ತ್ರದ ವಿಷಯಗಳೂ ಸೇರಿದಂತೆ ವೈಜ್ಞಾನಿಕ ವಿಷಯಗಳನ್ನು ಸಮರ್ಥವಾಗಿ ತಿಳಿಸಬಲ್ಲ ಮಾಧ್ಯಮವಾಗಿದೆ ಎಂಬ ವಿಚಾರ ಮೊಟ್ಟಮೊದಲನೆಯ ಬಾರಿಗೆ ಅರಿವಾಯಿತು.

ಮೂರು ಸಾವಿರ ವರ್ಷಗಳ ಹಿಂದೆ ಸಂಸ್ಕೃತ ಭಾಷೆ ಮತ್ತು ಅದನ್ನು ಪಾಣಿನಿಯು ವೈಜ್ಞಾನಿಕವಾಗಿ ರೂಪಿಸಿದ ರೀತಿ ಅವುಗಳನ್ನು ವಿದ್ವಲ್ಲೇಖಕರು ಮೊದಲು ವಿಶದೀಕರಿಸಿ, ಅದು ಯಾವ ರೀತಿ ವೈಜ್ಞಾನಿಕ ವಿಷಯಗಳನ್ನು ವಿವರಿಸಬಲ್ಲ ಮಾಧ್ಯಮವಾಯಿತು ಎಂಬುದನ್ನು ನಂತರ ತೋರಿಸಿಕೊಟ್ಟಿದ್ದಾರೆ. ಬ್ರಹ್ಮಗುಪ್ತನ ಗಣಿತಶಾಸ್ತ್ರವನ್ನು ಕುರಿತು ಡಾ. ರಾಜಾ ರಾಮಣ್ಣನವರು ಹೀಗೆ ಹೇಳುತ್ತಾರೆ, "ಬ್ರಹ್ಮಗುಪ್ತನು ಕ್ರಿ.ಶ. ಏಳನೆಯ ಶತಮಾನದಲ್ಲಿ ಜೀವಿಸಿದ್ದನು. ಈ ರೀತಿ ಸಮೀಕರಣ ಸೂತ್ರಗಳು ನಂತರದ ಪ್ರಕ್ಷೇಪಗಳು ಸೇರಿ ಪೆಲಿಯನ್ ಸೂತ್ರಗಳು ಎಂದು ಖ್ಯಾತಿ ಪಡೆದವು. ಜಾನ್ ಪೆಲ್ ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಜೀವಿಸಿದ್ದವನು. ಅಂದರೆ ಅಂತಹ ಸೂತ್ರಗಳು ಒಂದು ಸಾವಿರ ವರ್ಷಗಳ ಹಿಂದೆ ಖಚಿತವಾದ ಪರಿಭಾಷೆಯನ್ನು ಹೊಂದಿ ಭಾರತದಲ್ಲಿ ಪ್ರಚಲಿತವಾಗಿದ್ದಿತು."

ವಿದ್ವಲ್ಲೇಖಕರು ಭಾರತೀಯ ಲಿಪಿಗಳ ಇತಿಹಾಸವನ್ನೂ ವಿವರಿಸಿದ್ದಾರೆ ಮತ್ತು ಲಿಪಿ ಸುಧಾರಣೆಯ ಬಗೆಗೆ ಚಿತ್ರ ಸಮೇತ ಒಂದು ಪ್ರಸ್ತಾವನೆಯನ್ನೂ ಮುಂದಿಟ್ಟಿದ್ದಾರೆ.

ಇಂದು ನಾವು ಸಂಸ್ಕೃತದ ಬಗೆಗೆ ಒಂದು ಹೊಸ ಜಾಗೃತಿಯನ್ನು ಕಾಣುತ್ತಿದ್ದೇವೆ ಹಾಗೂ ಅದನ್ನು ಜನಪ್ರಿಯಗೊಳಿಸಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತಿದೆ. ಅನೇಕ ಹೊಸ ದೇಶಗಳಲ್ಲಿಯೂ ಸಹ ಈ ಶ್ರೇಷ್ಠ ಭಾಷೆಯ ಬಗೆಗೆ ಆಸಕ್ತಿಯು ಜಾಸ್ತಿಯಾಗಿದೆ ಎಂಬುದನ್ನು ನಾನು ಗಮನಿಸಿದ್ದೇನೆ. ಇಂತಹ ಸಮಯದಲ್ಲಿ ಈ ಪುಸ್ತಕದ ಪ್ರಕಟಣೆ ವಿಶೇಷವಾಗಿ ಪ್ರಸಕ್ತವೆನಿಸುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದೊರಕಬೇಕು ಎನ್ನುವ ತನ್ನ ಅಭಿಪ್ರಾಯವನ್ನು ೧೯೩೦ರಲ್ಲಿ ಬರೆದ 'ದಿ ಕೇಸ್ ಫಾರ್ ಇಂಡಿಯ' ಎನ್ನುವ ಪುಸ್ತಕದಲ್ಲಿ ಅಮೆರಿಕದ ಇತಿಹಾಸಕಾರ ಮತ್ತು ತತ್ವಶಾಸ್ತ್ರಜ್ಞ ದಿವಂಗತ ವಿಲ್ ಡುರಾಂಟ್ ತಿಳಿಸುವಾಗ ಸಂಸ್ಕೃತ ಭಾಷೆಗೆ

ಅವನು ನೀಡಿರುವ ಗೌರವದ ಕೆಳಗಿನ ಮಾತುಗಳು ನಮ್ಮ ಜನಗಳಿಗೆ ಸ್ಫೂರ್ತಿ ನೀಡುತ್ತವೆ (ಪು.೪).

"ಭಾರತವು ನಮ್ಮ ಜನಾಂಗದ ಮಾತೃಭೂಮಿ ಮತ್ತು ಸಂಸ್ಕೃತವು ಯೂರೋಪಿಯನ್ ಭಾಷೆಗಳ ತಾಯಿ; ಅವಳು ನಮ್ಮ ತತ್ವಶಾಸ್ತ್ರದ ಮಾತೆ; ಅರಬರ ಮೂಲಕವಾಗಿ ಆಕೆಯು ನಮ್ಮ ಗಣಿತಶಾಸ್ತ್ರದ ತಾಯಿ; ಬುದ್ಧನ ಮೂಲಕವಾಗಿ ಆಕೆಯು ಕ್ರೈಸ್ತ ಚಿಂತನೆಯಲ್ಲಿ ಮೂಡಿರುವ ಆದರ್ಶಗಳ ತಾಯಿ; ಗ್ರಾಮ ಸಮುದಾಯದ ಮೂಲಕ ಸ್ವಪ್ರಭುತ್ವದ ಹಾಗೂ ಪ್ರಜಾಪ್ರಭುತ್ವದ ಮಾತೆ. ಈ ಎಲ್ಲ ರೀತಿಗಳಿಂದ ತಾಯಿ ಭಾರತಿಯು ನಮ್ಮೆಲ್ಲರ ಮಾತೆ."

ರಾಮಕೃಷ್ಣ ಮಠ **ಸ್ವಾಮಿ ರಂಗನಾಥಾನಂದ**
ಹೈದರಾಬಾದ್

ಮೂಲ ಲೇಖಕರ ಪ್ರಸ್ತಾವನೆ

'ಸಂಸ್ಕೃತ ದಿನದ' ಈ ಸುಸಂದರ್ಭದಲ್ಲಿ ಸಂಸ್ಕೃತ ಮತ್ತು ವಿಜ್ಞಾನವನ್ನು ಕುರಿತಾದ ನನ್ನ ಚಿಂತನೆಗಳನ್ನು ನಿಮ್ಮೊಡನೆ ಹಂಚಿಕೊಂಡು ನಿಮ್ಮನ್ನು ಉದ್ದೇಶಿಸಿ ಇಂದು ಮಾತನಾಡಲು ನನಗೆ ತುಂಬ ಸಂತೋಷವಾಗುತ್ತಿದೆ. ಭಾರತೀಯ ವಿದ್ಯಾಭವನದ ಶ್ರೀ ಎಸ್. ರಾಮಕೃಷ್ಣನ್ ಅವರು, ನನಗೆ ಈ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ, ಅವರಿಗೆ ನಾನು ಕೃತಜ್ಞನಾಗಿದ್ದೇನೆ

ಈ ಉಪನ್ಯಾಸವನ್ನು ವಿನ್ಯಾಸಗೊಳಿಸುವಲ್ಲಿ ನನಗೆ ಸಹಾಯ ಮಾಡಿರುವ ಡಾ. ಸಚ್ಚಿದಾನಂದ ದಾಸ್ ಮತ್ತು ಡಾ. ಬಿ.ವಿ. ಸುಬ್ಬರಾಯಪ್ಪನವರಿಗೆ ನಾನು ಋಣಿಯಾಗಿದ್ದೇನೆ.

ಬೊಂಬಾಯಿ **ರಾಜಾ ರಾಮಣ್ಣ**
ಆಗಸ್ಟ್ ೪, ೧೯೮೨

Blank

ಪರಿವಿಡಿ

Blank

ಸಂಸ್ಕೃತ ಮತ್ತು ವಿಜ್ಞಾನ

Blank

೧. ಒಂದು ಭಾಷೆಯಾಗಿ ಸಂಸ್ಕೃತ

ಸಂಸ್ಕೃತವು ಇತರ ಎಲ್ಲ ಭಾಷೆಗಳಂತೆಯೇ ಇದ್ದರೂ ಅದು ಬಹಳ ಸಂಕೀರ್ಣವಾದದ್ದು ಮತ್ತು ಎಲ್ಲ ದೃಷ್ಟಿಗಳಿಂದಲೂ ಮೃತಭಾಷೆಯೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ತೀರ ಹೆಚ್ಚೆಂದರೆ ಅದರಲ್ಲಿ ಉತ್ತಮ ಸಾಹಿತ್ಯವಿದೆ ಹಾಗೂ ಸಾಂಸ್ಕೃತಿಕ ಮೌಲ್ಯಗಳಿವೆ ಎಂದು ಅನೇಕರು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ವಿರುದ್ಧವಾಗಿ, ಅದೊಂದು ರಹಸ್ಯವಾದ ಪದಗಳ ಗುಂಪೆಂದೂ ಪ್ರಾರ್ಥನೆ, ಮಂತ್ರೋಚ್ಚಾರಣೆ, ಮಾಯಮಂತ್ರ ಮುಂತಾದವುಗಳ ಮೂಲಕ ಒಂದು ಧಾರ್ಮಿಕ ವಾತಾವರಣವನ್ನು ಸೃಷ್ಟಿಸುವ ಭಾಷೆಯೆಂದು ಕೆಲವರು ಅದನ್ನು ಪರಿಗಣಿಸುತ್ತಾರೆ. ಆದರೆ ಸಂಸ್ಕೃತವು ಇವೆಲ್ಲವನ್ನೂ ಮೀರಿದ್ದು, ಅದರಲ್ಲಿ ಶ್ರೇಷ್ಠವಾದ ಹಾಗೂ ಉಪಯುಕ್ತವಾದ ಅಂಶಗಳು ಅಂತರ್ಗತವಾಗಿವೆ. ಅದರಲ್ಲಿ ವಿಜ್ಞಾನ ಮತ್ತು ಕಲೆ, ಎರಡೂ ಮಿಳಿತಗೊಂಡಿವೆ.

ಸಂಸ್ಕೃತ ವ್ಯಾಕರಣ ಮತ್ತು ಪಾಣಿನಿ

ಗ್ರೀಕ್ ಮತ್ತು ಲ್ಯಾಟಿನ್ ಸೇರಿದಂತೆ, ಪ್ರಪಂಚದ ಇತರ ಯಾವ ಭಾಷೆಗಳಲ್ಲಿಯೂ ಕಾಣದೇ ಇರುವ ವೈಜ್ಞಾನಿಕ ಅಸ್ತಿಭಾರ ಸಂಸ್ಕೃತಕ್ಕೆ ಇದೆ. ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳಿಗೂ ಸಂಸ್ಕೃತಕ್ಕೂ ತುಂಬ ಹತ್ತಿರದ ಸಂಬಂಧವು ಪದಸಂಪತ್ತು ಮತ್ತು ವ್ಯಾಕರಣಗಳಲ್ಲಿ ಕಾಣಬರುತ್ತದೆ. ('ಆಕ್ಸಿಲ್' ಎಂಬ ಇಂಗ್ಲಿಷ್ ಪದ ಸಂಸ್ಕೃತದಲ್ಲಿ 'ಅಕ್ಷ' ಎಂದೂ, ಗ್ರೀಕ್‌ನಲ್ಲಿ ಏಕ್ಸಿಯೋನ್ ಎಂದೂ, ಲ್ಯಾಟಿನ್‌ನಲ್ಲಿ 'ಆಕ್ಸಿಸ್' ಎಂದೂ ಇದೆ). ಇದಕ್ಕೆ ಪಾಣಿನಿಯು ತನ್ನ ಅಷ್ಟಾಧ್ಯಾಯಿಯಲ್ಲಿ ನೀಡಿರುವ ವ್ಯಾಕರಣದ ಪರಂಪರೆಯೇ ಮುಖ್ಯ ಕಾರಣ.[1] ಸುಮಾರು 2500 ವರ್ಷಗಳ ಹಿಂದೆ ರಚಿತವಾದ ಈ ಗ್ರಂಥದಲ್ಲಿ, ನಾಲ್ಕು ಪಾದಗಳಲ್ಲಿರುವ ಎಂಟು ಅಧ್ಯಾಯಗಳಿವೆ. ಪಾಣಿನಿಯ ಈ ಗ್ರಂಥವು ಮಾನವನ ಬುದ್ಧಿಶಕ್ತಿಯ ಅತ್ಯಂತ ಶ್ರೇಷ್ಠತೆಯನ್ನು ಪ್ರದರ್ಶಿಸುತ್ತದೆ. ಮಾನವನ ಬುದ್ಧಿಶಕ್ತಿಯ ಇತಿಹಾಸದಲ್ಲಿ ಒಂದು ಭಾಷೆಯನ್ನು 'ರಾಸಾಯನಿಕ ವಿಶ್ಲೇಷಣೆಗೆ' ವೈಜ್ಞಾನಿಕ ರೀತಿಯಲ್ಲಿ (ಶಬ್ದಾನುಶಾಸನ) ಒಳಪಡಿಸಿರುವುದರಲ್ಲಿ ಇದೇ ಮೊತ್ತಮೊದಲನೆಯ ಪ್ರಯತ್ನ. ಪಾಣಿನಿಯ ವ್ಯಾಕರಣವು ಶ್ರೇಷ್ಠ ತರ್ಕ ಹಾಗೂ ಕಲಾತ್ಮಕ ವ್ಯವಸ್ಥೆಯನ್ನು ಹೊಂದಿದ ಶ್ರೇಷ್ಠ ಗ್ರಂಥವೆಂದು

ಪರಿಗಣಿತವಾಗಿರುವುದಲ್ಲದೆ, ಭಾಷಾ ಲಕ್ಷಣಗಳನ್ನು ವಿವರಿಸುವುದರಲ್ಲಿ ಹಾಗೂ ಪದಗಳ ಮಿತ ನಿರ್ವಹಣೆಯಲ್ಲಿ ಇಂದಿಗೂ ಅದನ್ನು ಮೀರಿಸಿದ ಉದಾಹರಣೆಗಳು ಕಂಡುಬಂದಿಲ್ಲ.

ಪಾಣಿನಿಯ ವ್ಯಾಕರಣ ಹಾಗೂ ಯೂಕ್ಲಿಡ್‌ನ ಜ್ಯಾಮಿತಿಗೂ ವಿಶೇಷ ಸಾಮರಸ್ಯಗಳಿವೆ. ಯೂಕ್ಲಿಡನು ತನ್ನ ಎಲಿಮೆಂಟ್ಸ್ ಎನ್ನುವ ಗ್ರಂಥವನ್ನು ಕೆಲವು ನಿರೂಪಣೆಗಳು, ಆಧಾರ ಸೂತ್ರಗಳು ಮತ್ತು ತರ್ಕಾಧಾರಗಳಿಂದ ಆರಂಭಿಸಿ, ಒಂದನ್ನು ಅರ್ಥಮಾಡಿಕೊಳ್ಳದೆ ಮತ್ತೊಂದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ ರೀತಿಯಲ್ಲಿ ಪ್ರಮೇಯಗಳನ್ನು ತಾರ್ಕಿಕ ರೂಪದಲ್ಲಿ ನೀಡುತ್ತ ಹೋಗಿದ್ದಾನೆ. ಅದೇ ರೀತಿಯಲ್ಲಿ ಪಾಣಿನಿಯು ಸಂಸ್ಕೃತ ಭಾಷೆಯನ್ನು ವಿಶ್ಲೇಷಿಸಿದ್ದಾನೆ. ಪಾಣಿನಿಯು ಕೆಲವು ಸಾಮಾನ್ಯ ತತ್ತ್ವಗಳನ್ನು ನಿರೂಪಿಸುವ ಧಾತುಗಳಿಂದ (ಸಂಸ್ಕೃತದಲ್ಲಿ 1700ಕ್ಕೂ ಹೆಚ್ಚು ಧಾತುಗಳಿವೆ. ಕೆಲವು ವಿದ್ವಾಂಸರ ಪ್ರಕಾರ ಇವುಗಳನ್ನು 120ಕ್ಕೆ ಇಳಿಸಬಹುದು) ಆರಂಭಿಸಿ, ಸ್ವರ, ವ್ಯಂಜನ, ನಾಮಪದ, ಸರ್ವನಾಮ, ವ್ಯಕ್ತಿ, ಆಧಿಕ್ಯಾರ್ಥದ ಪದ, ಕ್ರಿಯಾಪದ ಮುಂತಾದವುಗಳನ್ನು ಅನೇಕ ಭಾಗಗಳಾಗಿ ವಿಂಗಡಿಸಿದ್ದಾನೆ. ನಂತರ ಅವನು ಧಾತುವಿನಿಂದ ಮತ್ತು ಪ್ರತ್ಯಯಗಳಿಂದ ಪದಗಳನ್ನು ಮಾಡುವ ಮತ್ತು ಪದಗಳಿಂದ ಸಂಯುಕ್ತ ಪದಗಳನ್ನು ಅಳವಡಿಸುವ ಹಾಗೂ ಸಂಯುಕ್ತ ಪದಗಳನ್ನು ಬಳಸಿಕೊಂಡು ನಿಷ್ಪನ್ನ ಪದಗಳ ಸರಣಿಯ ವಿಧಾನವನ್ನು ವಿವರಿಸಿದ್ದಾನೆ. ಇದು ಗಣಿತಶಾಸ್ತ್ರದಲ್ಲಿ ಪ್ರಚಲಿತವಾಗಿರುವ ಲಕ್ಷಣದಂತೆ ಕಾಣಬರುತ್ತದೆ (ಒಂದು ವಾಕ್ಯದಲ್ಲಿ ತಾತ್ತ್ವಿಕವಾಗಿ ವಿಸಂಧಿ ಇಲ್ಲದಿರುವುದು ಸಂಸ್ಕೃತದಲ್ಲಿ ಮಾತ್ರ. ಇದು ಸಾಧ್ಯವಾಗಿರುವುದು ಸಂಧಿಯನ್ನು ಕುರಿತಾದ ನಿಯಮಗಳಿಂದ). ಉದಾಹರಣೆಗೆ 'ಗಮ್' ಎಂಬ ಧಾತುವಿನಿಂದ ಗತ, ಗತಿ, ಗತ್ವರ, ಗಂತವ್ಯ, ಗಮನ, ಗಮಯಿತ್ರ, ಗಮನಿಕಾ ಇತ್ಯಾದಿಗಳನ್ನು ರಚಿಸಬಹುದು. ಪಾಣಿನಿಯು ತನ್ನ ಚಿಂತನೆಗಳನ್ನು ಹಿಂಡಿ, ಭಟ್ಟಿ ಇಳಿಸಿ ಸುಮಾರು ನಾಲ್ಕು ಸಾವಿರ ಸೂತ್ರಗಳನ್ನು ಆರು ವಿಭಾಗಗಳಲ್ಲಿ ಪ್ರಸ್ತುತಪಡಿಸಿದ್ದಾನೆ; ಅವೇ ಸಂಜ್ಞಾ (ನಿರೂಪಣೆ), ಪರಿಭಾಷಾ (ವ್ಯಾಖ್ಯೆಯ ನಿಯಮಗಳು), ವಿಧಿ (ಸಾಮಾನ್ಯ ನಿಯಮಗಳು), ನಿಯಮ (ನಿರ್ಬಂಧ ನಿಯಮಗಳು), ಅಧಿಕಾರ (ನಿರ್ವಹಣ ನಿಯಮಗಳು) ಮತ್ತು ಅತಿ ದೇಶ (ಸಾಮ್ಯದ ಆನ್ವಯಿಕ ನಿಯಮಗಳು).

ಸಂಸ್ಕೃತದಲ್ಲಿ ಪದ ಸಮುಚ್ಚಯಕ್ಕೆ ಅರ್ಥವನ್ನು ನೀಡುವಲ್ಲಿ, ಪ್ರತ್ಯಯಗಳ ಪಾತ್ರ ಪ್ರಮುಖವಾದುದು. ಯಾವ ಪ್ರತ್ಯಯವನ್ನು ಉಪಯೋಗಿಸಬೇಕೆಂಬುದು, ಯಾವ ಅರ್ಥವನ್ನು ಕೊಡಬೇಕು ಎನ್ನುವುದರ ಮೇಲೆ ಆಧಾರಿತವಾಗಿರುತ್ತದೆ. ಆದುದರಿಂದ ರಚನೆಯು ಅದರ ಪ್ರಕಾರ ನಿರೂಪಿತವಾಗಿರುತ್ತದೆ. ನೌ ಎಂಬ ಪದದ ನಂತರ ಬರುವ ಯತ್ ಎಂಬ ಪ್ರತ್ಯಯ ತೃತೀಯ ವಿಭಕ್ತಿಯಲ್ಲಿ

'ದಾಟಬೇಕಾದುದು' ಎನ್ನುವ ಅರ್ಥವನ್ನು ಕೊಡುತ್ತದೆ. ಅದೇ ರೀತಿ ನಾವ್ಯಂ (ನಾವಾ ತಾರ್ಯಂ) ಎಂಬ ಪದದ ಅರ್ಥ ನಾವೆಯಿಂದ ದಾಟಬೇಕಾದುದು ಎಂದಾಗುತ್ತದೆ. ಅಂದರೆ, ನೀರು ಅಥವಾ ಒಂದು ನದಿ ಎನ್ನುವ ಅರ್ಥ ಬರುತ್ತದೆ. ಆದರೆ ಅದೇ ಪ್ರತ್ಯಯವು ಒಂದು ಪದದ ನಂತರ ಸಪ್ತಮಿ ವಿಭಕ್ತಿಯಲ್ಲಿ ಬಳಕೆಯಾದರೆ 'ಆ ವಿಷಯದಲ್ಲಿ ಅತ್ಯುತ್ತಮವಾದುದು' ಎನ್ನುವ ಅರ್ಥ ನೀಡುತ್ತದೆ: ಸಾಮಾನ್ಯಃ (ಸಾಮಸು ಸಾಧುಃ) ಅಂದರೆ ಸಾಮವೇದವನ್ನು ಬಲ್ಲವನು ಎನ್ನುವ ಅರ್ಥ ಕೊಡುತ್ತದೆ. ಇದು ಸಾಧು ಎಂದರೆ ಉಪಕಾರ ಮಾಡಿದವನು ಅಥವಾ ಒಳ್ಳೆಯ ಮನುಷ್ಯ ಎನ್ನುವ ಅರ್ಥ ಬರುವುದಿಲ್ಲ; ಅದರ ಬದಲು ಪ್ರವೀಣ ಅಥವಾ ಯೋಗ್ಯ ಎನ್ನುವ ಅರ್ಥ ಬರುತ್ತದೆ. ಪ್ರ ಎನ್ನುವ ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು: ಇದು ರಚನೆಯಲ್ಲಿ ಕ್ರಿಯಾಪದವಾಗಿ ಉಪಸರ್ಗದ ಜೊತೆಯಲ್ಲಿ ಸೇರಿ ಪ್ರಣಾಯಕಃ, ಅಂದರೆ ನೇತಾರ ಎನ್ನುವ ಅರ್ಥ ಬರುತ್ತದೆ. ಅದೇ ಪ್ರ ಎನ್ನುವುದು ನಿಪಾತ ಎಂದು ಪ್ರನಾಯಕಃ ಎಂದು ಹೇಳಿದಾಗ ದರಿದ್ರ ನೇತಾರ ಎಂದಾಗುತ್ತದೆ. ಈ ರೀತಿ ಒಂದು ಗುಂಪು ಜಡೋಷ್ಣ ಮತ್ತು ಉಷ್ಣ ಚಲನಶಾಸ್ತ್ರ (ಥರ್ಮೊಡೈನಾಮಿಕ್ಸ್)[2] ಕಡಿಮೆ ಪದಗಳ ಬಳಕೆಯಿಂದ ಉಂಟಾಗುತ್ತದೆ, ಜೊತೆ ಜೊತೆಗೆ ಪದಲಾಲಿತ್ಯವನ್ನೂ ಉಳಿಸಿಕೊಳ್ಳುತ್ತವೆ.

ಸಂಸ್ಕೃತ ಭಾಷಾ ಧ್ವನಿಶಾಸ್ತ್ರ

ಧ್ವನಿ ಶಾಸ್ತ್ರವು ಸಂಸ್ಕೃತದಲ್ಲಿ ವಿಜ್ಞಾನದ ಮಟ್ಟಕ್ಕೆ ಏರಿರುವುದು ಗಮನಿಸಬೇಕಾದ ಸಂಗತಿ. ಅದು ಎಷ್ಟೊಂದು ನಿಖರವಾಗಿ ಹಾಗೂ ವೈಜ್ಞಾನಿಕವಾಗಿ ಅಧ್ಯಯನಕ್ಕೆ ಒಳಗಾಗಿದೆ ಎನ್ನುವುದು ಆಧುನಿಕ ವಿಜ್ಞಾನಿಯನ್ನೂ ಚಕಿತಗೊಳಿಸುತ್ತದೆ. ನಾಲಗೆಯು ಯಾವ ರೀತಿ ಹೊರಳುತ್ತದೆ, ಅದು ಯಾವುದನ್ನು ಕಂಪನಗೊಳಿಸುತ್ತದೆ, ಮಾತಿನ ಯಾವ ಅಂಗಗಳು ಒಂದು ಅಕ್ಷರದ ಶಬ್ದವನ್ನು ಉಂಟುಮಾಡಲು ಅದರಲ್ಲಿ ಭಾಗವಹಿಸುತ್ತವೆ ಮತ್ತು ಎಷ್ಟರಮಟ್ಟಿಗೆ ಇತ್ಯಾದಿಗಳ ಆಧಾರದ ಮೇಲೆ ಸ್ವರಗಳು, ವ್ಯಂಜನಗಳು, ಅನುನಾಸಿಕಗಳು, ಸವರ್ಣ ಅಕ್ಷರಗಳು ನಿರ್ಧಾರಗೊಳ್ಳುತ್ತವೆ. ಉದಾಹರಣೆಗೆ ಅಂಗಗಳನ್ನು ಬಾಯಿಯ ಆಕಾರಕ್ಕೆ ತಕ್ಕಂತೆ ಉಜ್ಜಿ ಒಂದು ಶಬ್ದವನ್ನು ಉಂಟುಮಾಡುವುದೇ ಸ್ವರವೆನ್ನಿಸಿಕೊಳ್ಳುತ್ತದೆ. ದಂತ್ಯದ ನ ಮತ್ತು ಮೂರ್ಧನ್ಯ ಣ ಎಂಬ ಅಕ್ಷರಗಳು ನಾಲಗೆಯು ಬಾಯಿಯೊಳಗೆ ಎಷ್ಟು ಆಳವಾಗಿ ಓಡಾಡುತ್ತದೆ ಎನ್ನುವುದರ ಮೇಲೆ ನಿರ್ಧಾರಿತವಾಗುತ್ತದೆ. ಸವರ್ಣ ಅಕ್ಷರಗಳು ಉಚ್ಚಾರಣೆಯ ಮೇಲೆ ನಿರ್ಧಾರಿತವಾಗಿದ್ದು (ಕಂಠ, ತಾಲು, ಮುರ್ಧ್ನೀ, ದನ್ತ, ಓಷ್ಠ, ನಾಸಿಕಾ), ಪ್ರಯತ್ನವು ಸಮನಾಗಿರುತ್ತದೆ. ಚ ಮತ್ತು ಶ ಎರಡೂ ತಾಲವ್ಯಗಳಾದರೂ, ಪ್ರಯತ್ನಗಳು ಭಿನ್ನವಾಗಿರುವುದರಿಂದ ಸವರ್ಣಗಳಲ್ಲಿ, ಚ ಎಂಬ ಅಕ್ಷರದ ಪ್ರಯತ್ನ

ಸ್ಪ್ರಿಷ್ಟವಾಗಿದ್ದರೆ, ಶ ಎಂಬುದು ವಿವೃತವಾಗಿರುತ್ತದೆ. ಅದೇ ರೀತಿಯಲ್ಲಿ ಕ ಮತ್ತು ಚ ಸ್ಪ್ರಿಷ್ಟ ಎಂಬ ಪ್ರಯತ್ನ ಹೊಂದಿದ್ದರೂ ಅವು ಸವರ್ಣಗಳಲ್ಲ, ಏಕೆಂದರೆ ಅವುಗಳ ಆಸ್ಯ ಭಿನ್ನವಾಗಿದೆ; ಒಂದು ಕಂಠ್ಯವಾಗಿದ್ದರೆ ಮತ್ತೊಂದು ತಾಲವ್ಯ. ಪಾರ್ಶ್ವತಃ ಮೂಗಿನಿಂದ ಹಾಗೂ ಬಾಯಿಯಿಂದ ಉಚ್ಚಾರ ಮಾಡುವ ಅಕ್ಷರವೇ ಅನುನಾಸಿಕ (ಮುಖನಾಸಿಕವಚನೊ). ಆದುದರಿಂದ ಙ, ಞ, ಣ ಮತ್ತು ನ ಮತ್ತು ಮ ಅನುನಾಸಿಕಗಳೇ ಹೊರತು ಕ, ಚ, ಟ, ತ, ಪ ಇತ್ಯಾದಿಗಳಂತೆ ವ್ಯಂಜನಗಳಲ್ಲ. ಏಕೆಂದರೆ ಈ ಅಕ್ಷರಗಳನ್ನು ಪೂರ್ಣವಾಗಿ ಬಾಯಿಯಿಂದ ಉಚ್ಚಾರ ಮಾಡಲಾಗುವುದು. ಅನುಸ್ವಾರವು ಪೂರ್ಣವಾಗಿ ಮೂಗಿನ ಮೂಲಕ ಉಚ್ಚರಿಸುವುದರಿಂದ ಅದು ಅನುನಾಸಿಕವಲ್ಲ. ಸಂಸ್ಕೃತದಲ್ಲಿ ಬಿಡಿ ಪದಗಳಾಗಲೀ ಅಥವಾ ಸಂಯುಕ್ತ ಪದವಾಗಲೀ, ಉಚ್ಚಾರ ಮಾಡುವ ರೀತಿಯಿಂದ ಭಿನ್ನ ಅರ್ಥವನ್ನು ನೀಡುತ್ತವೆ.

ಸಂಸ್ಕೃತದ ರೂಪ ಮತ್ತು ಬೆಳವಣಿಗೆ

ಸಂಸ್ಕೃತ ವ್ಯಾಕರಣವು ತುಂಬ ಖಚಿತವಾದದ್ದು ಹಾಗೂ ಪೂರ್ಣವಾದುದಾದ್ದರಿಂದ, ಆ ಭಾಷೆಯ ರೂಪವು ಸರಿಯಾಗಿ ನಿರೂಪಿತವಾಗಿದ್ದು ವ್ಯವಸ್ಥಿತವಾಗಿದೆ ಹಾಗೂ ಸಮಗ್ರವಾಗಿದೆ. ವಾಸ್ತವವಾಗಿ ಸಂಸ್ಕೃತ ಸಾಹಿತ್ಯವು ಗಣಿತಶಾಸ್ತ್ರದ ಸುಂದರವಾದ ಹಾಗೂ ಖಚಿತವಾದ ಗುಣಲಕ್ಷಣಗಳನ್ನೇ ಹೊಂದಿದ್ದು ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಗ್ರೀಕರೂ ಸಹ ಇಂತಹ ವ್ಯವಸ್ಥಿತ ಲಕ್ಷಣ ತಮ್ಮದೆಂದು ಹೇಳಿಕೊಳ್ಳಲಾಗುವುದಿಲ್ಲ.

ಸಂಸ್ಕೃತವು ಗಣಿತಶಾಸ್ತ್ರದ ಮಾದರಿಯಲ್ಲಿ ವ್ಯವಸ್ಥಿತ ಮತ್ತು ತಾರ್ಕಿಕ ರೀತಿಯಲ್ಲಿ, ಜ್ಯಾಮಿತಿಯಂತೆ, ಬೆಳವಣಿಗೆಯನ್ನು ಹೊಂದಿದ್ದು ಧಾತುಗಳನ್ನು ವಿವಿಧ ನಿಯಮಗಳಿಗನುಗುಣವಾಗಿ ಬಳಸಿಕೊಂಡು ಸಣ್ಣ ಮತ್ತು ದೊಡ್ಡ ಪದಗಳ ರಚನೆಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿರುವುದು ಗಮನಾರ್ಹ ಸಂಗತಿ. ಆದರೆ ಸಂಸ್ಕೃತ ಭಾಷೆಯನ್ನು ವ್ಯವಸ್ಥಿತ ನಿಯಮಗಳಿಗನುಗುಣವಾದ ಭಾಷಾ ಕಟ್ಟಳೆಗಳನ್ನನುಸರಿಸಿ ಅಳವಡಿಸಿರುವುದರಿಂದ, ಈ ಭಾಷೆಗೆ ಒಂದು ರೀತಿಯ ಕೃತಕ ಲಕ್ಷಣವಿರುವಂತೆ ತೋರುತ್ತದೆ. ಯಾರಾದರೂ ಸಂಸ್ಕೃತವು ಸ್ವಾಭಾವಿಕವಲ್ಲದ ಭಾಷೆ ಎಂದು ಹೇಳಿದರೆ, ಈ ಮೇಲಿನ ದೃಷ್ಟಿಯಿಂದ ಅಲ್ಲ ಎಂಬುದನ್ನು ಗಮನಿಸಬೇಕು. ಇದರ ನಿಜವಾದ ಅರ್ಥವೇನೆಂದರೆ, ಸಂಸ್ಕೃತವನ್ನು ಮಾತನಾಡುವವರಿಗೂ ಕೂಡ ಇದು ಮಾತೃಭಾಷೆ ಆಗಿಲ್ಲದೆ, ಲ್ಯಾಟಿನ್‌ನಂತೆ ಉಪಾಧ್ಯಾಯರಿಂದ ಕಲಿಯಬೇಕಾದ ಭಾಷೆಯಾಗಿದೆ.

ಸಂಸ್ಕೃತ– ಎಲ್ಲರನ್ನೂ ಒಳಗೊಂಡಿರುವ ಭಾಷೆ

ಇದರ ಅರ್ಥವೇನೆಂದರೆ, ಸಂಸ್ಕೃತದಲ್ಲಿ ಎಲ್ಲ ರೀತಿಯ ಚಿಂತನೆಗಳನ್ನೂ ಅಂದರೆ ಪುರಾಣಗಳಿಂದ ಸಾಹಿತ್ಯದವರೆಗೆ ಮತ್ತು ವಿಜ್ಞಾನದಿಂದ ತತ್ತ್ವಶಾಸ್ತ್ರದವರೆಗೆ ಅಭಿವ್ಯಕ್ತಿಗೊಳಿಸಬಹುದು. ಗಣಿತಶಾಸ್ತ್ರದಲ್ಲಿರುವ 'ಆನ್‌ಟು' ಅಥವಾ ಅನೇಕದಿಂದ ಒಂದರ ಕಡೆಗೆ (ಮೆನಿ ಟು ಒನ್) ಸೂಚಿಸುವಂತೆ, ಸಂಸ್ಕೃತದಲ್ಲಿಯೂ ಒಂದೇ ಚಿಂತನೆಯನ್ನು ಅನೇಕ ವಿಧಗಳಲ್ಲಿ ಅಭಿವ್ಯಕ್ತಿಗೊಳಿಸುವ ನಯಗಾರಿಕೆ ಇದೆ. ಪ್ರತಿಯೊಂದು ಹೇಳಿಕೆಗೂ, ಒಂದಕ್ಕಿಂತ ಹೆಚ್ಚು ಅರ್ಥಗಳಿದ್ದು, ಭಾಷೆಗೆ ಒಂದು ರೀತಿಯ ವಿವಿಧ ವರ್ಣ ಸ್ಫುರಣ ಗುಣವನ್ನು ನೀಡುತ್ತದೆ. ಇದರಿಂದಾಗಿ ಗದ್ಯ, ಪದ್ಯ, ಸಂಗೀತ, ನೃತ್ಯ ಮುಂತಾದವುಗಳಿಗೆ ಅವಕಾಶ ಮಾಡಿಕೊಡುತ್ತದೆ. ಪುರಾಣಗಳಲ್ಲಿರುವಂತೆ ಕಲ್ಪನೆಯ ಕಾರ್ಯಕ್ಕೂ ಅವಕಾಶವಾಗುತ್ತದೆ. ಪುರಾಣವು ಕೇವಲ ಒಂದು ಭಾಷೆ ಮಾತ್ರವಲ್ಲದೆ, ಸಾಮಾನ್ಯ ಪದಗಳು ಅಭಿವ್ಯಕ್ತಿಗೊಳಿಸಲಾಗದಂತಹ, ಉನ್ನತ ಮಟ್ಟದ ಭಾಷೆ ಎಂದು ಭಾವಿಸುವುದಾದರೆ, ಸಂಸ್ಕೃತ ಭಾಷೆಯಲ್ಲಿ ಉನ್ನತಮಟ್ಟದ ನಯಗಾರಿಕೆ ಇದೆ ಎಂದು ತಿಳಿಯಬೇಕು; ಏಕೆಂದರೆ ಸಂಸ್ಕೃತ ಪುರಾಣಗಳು ಹೆಚ್ಚಿನ ವ್ಯಾಪ್ತಿ ಹೊಂದಿದ್ದು, ಶ್ರೇಷ್ಠ ರೀತಿಯ ಕಲ್ಪನಾ ಸಾಂಕೇತಿಕತೆ ಹಾಗೂ ಅನೇಕಸಾರಿ ಅಗಾಧತೆಯನ್ನೂ ತೋರ್ಪಡಿಸುತ್ತವೆ. ಇದೇ ಮಾತುಗಳನ್ನು ತತ್ತ್ವಶಾಸ್ತ್ರದ ಬಗೆಗೂ ಹೇಳಬೇಕು; ಏಕೆಂದರೆ ಇದರಲ್ಲಿ ವಿಶೇಷ ಸೂಕ್ಷ್ಮತೆಯ ಆವಶ್ಯಕತೆ ಇದ್ದು, ಅತ್ಯಂತ ಲೌಕಿಕ ವಿಷಯಗಳಿಮದ ಹಿಡಿದು ಅತ್ಯಂತ ಶ್ರೇಷ್ಠ ಮಟ್ಟದ ಆಧ್ಯಾತ್ಮಿಕದವರೆಗೆ ವಿಚಾರಗಳನ್ನು ಅಭಿವ್ಯಕ್ತಿಗೊಳಿಸಬೇಕಾಗುತ್ತದೆ.

ಸಂಸ್ಕೃತ ಭಾಷೆಯ ಶಾಶ್ವತತೆ

ಭಾಷೆಯಾಗಿ ಸಂಸ್ಕೃತಕ್ಕಿರುವ ಶಾಶ್ವತತೆ ಇತರ ಕೆಲವು ಭಾಷೆಗಳಿಗೂ ಇಲ್ಲ. ಪ್ರಾಚೀನ ಕಾಲದಲ್ಲಿ ಶಿಕ್ಷಣವು ಮೌಖಿಕವಾಗಿದ್ದು, ಜ್ಞಾನವನ್ನು ಶಾಶ್ವತವಾಗಿ ಇಟ್ಟುಕೊಳ್ಳುವ ಹಾಗೂ ಅದನ್ನು ಖಚಿತವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುವ ಆವಶ್ಯಕತೆ ಇದ್ದಿತು. ಇದು ಪದ್ಯರೂಪದ ಪರಂಪರೆಗೆ ಹೆಚ್ಚು ಮಹತ್ವಕೊಟ್ಟು, ಕಾವ್ಯ ಮತ್ತು ಧ್ವನಿಶಾಸ್ತ್ರಗಳಿಗೆ ಪ್ರಾಶಸ್ತ್ಯ ನೀಡಿತು. ಹಾಗೇ ಮತ್ತೊಂದು ಕಡೆಯಿಂದ ತಪ್ಪುಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಪದಗಳನ್ನು ಸೂತ್ರಗಳನ್ನಾಗಿ ಪರಿವರ್ತಿಸುವ ಕಾರ್ಯವೂ ಮುಂದುವರಿಯಿತು. ಪಾಣಿನಿಯ ವ್ಯಾಕರಣದ ರಚನೆಯಾದ ನಂತರ ಸಂಸ್ಕೃತ ಭಾಷೆಯು ಪ್ರಮಾಣೀಕೃತಗೊಂಡು, ಭಾಷಾ ಬದಲಾವಣೆಗಳಿಗೆ ಆಸ್ಪದವಿಲ್ಲದಾಯಿತು. ಸಾಮಾನ್ಯವಾಗಿ ಪ್ರಪಂಚದಾದ್ಯಂತ ಎಲ್ಲರೂ ಒಪ್ಪಿಕೊಂಡಿರುವಂತೆ ಇಂದಿಗೂ ಕಾಣಬರುವ ಸಂಸ್ಕೃತ ಸಾಹಿತ್ಯ ತೀರ

ಕನಿಷ್ಠ ಮಟ್ಟದಲ್ಲಿ ಬದಲಾವಣೆಗೊಂಡಿರುವುದು ಕಂಡುಬರುತ್ತದೆ. ಋಗ್ವೇದವೇ ಮುಂತಾದ ಕೃತಿಗಳು ಆರಂಭದಲ್ಲಿ ಹೇಗೆ ಇದ್ದವೋ ಈಗಲೂ ಅಷ್ಟೇ ನಿಖರವಾಗಿವೆ ಎಂಬುದೂ ಗಮನಾರ್ಹ ಸಂಗತಿ.

ಸಂಸ್ಕೃತ ಭಾಷೆಯಲ್ಲಿ ವಿಶ್ವಕೋಶ ಲಕ್ಷಣ

ಯಾವ ಶ್ರೇಷ್ಠ ಭಾಷೆಯಾದರೂ, ಅದನ್ನು ಬಳಸುವ ಜನಗಳ ಆಶೋತ್ತರಗಳನ್ನು ಪ್ರತಿಬಿಂಬಿಸುವಂತಿರಬೇಕು ಮತ್ತು ವಿಶ್ವಕೋಶದಂತೆ ಇದ್ದು ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಇರುವ ವಿಷಯಗಳನ್ನು ಅಭಿವ್ಯಕ್ತಿಗೊಳಿಸಲು ಅರ್ಹವಾಗಿರಬೇಕು. ಸಂಸ್ಕೃತದಲ್ಲಿ ರಾಮಾಯಣ ಮತ್ತು ಮಹಾಭಾರತಗಳಿದ್ದು, ಸಾಧ್ಯವಾಗುವ ಎಲ್ಲ ರೀತಿಯ ಲಕ್ಷಣಗಳಿಗೂ ಅವುಗಳಲ್ಲಿ ಅವಕಾಶವಿದೆ. ಆಧುನಿಕ ಜೀವನವೂ ಸೇರಿದಂತೆ ಮಾನವನ ಎಲ್ಲ ಗುಣಗಳೂ ಅದರಲ್ಲಿ ಕಾಣದೇ ಇರುವ ಸಾಧ್ಯತೆಯೇ ಅಲ್ಲಿಲ್ಲ. 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ಕ್ವಚಿತ್' ಹಾಗೂ 'ವ್ಯಾಸೋಚ್ಛಿಷ್ಟಂ ಜಗತ್ಸರ್ವಂ'[3] ಎಂಬ ಉಕ್ತಿಗಳಲ್ಲಿ ಅತಿಶಯೋಕ್ತಿಯಿಲ್ಲ. ಧರಿಸಿರುವ ಬಟ್ಟೆಗಳು ಭಿನ್ನವಾಗಿರಬಹುದು. ಆದರೆ ಚಿಂತನೆಯು ಮಾತ್ರ ಒಂದೇ ರೀತಿಯದು.

ಉಪಯುಕ್ತ ಭಾಷೆಯಾಗಿ ಸಂಸ್ಕೃತ

ಒಂದು ಭಾಷೆಯನ್ನು ಶ್ರೇಷ್ಠವಾಗಿ ಮಾಡುವ ಅಂಶಗಳೇನು ಹಾಗೂ ಅದಕ್ಕೆ ಭಿನ್ನವಾಗಿ ಒಂದು ಭಾಷೆಯನ್ನು ಉಪಯುಕ್ತವಾಗಿ ಮಾಡುವ ಗುಣಗಳೇನು ಎಂಬುದನ್ನು ಗಮನಿಸಲಾಗಿದೆ. ಮೊದಲನೆಯದಾಗಿ ಒಂದು ಭಾಷೆಯು ಉಪಯುಕ್ತ ವಾಗಿರಬೇಕಾದರೆ, ಅದು ಸರಳವಾಗಿರಬೇಕು. ಸಂಸ್ಕೃತವು ಸರಳವಾದ ಭಾಷೆ. ಅದು ತನ್ನ ಅವನತಿಯ ಹಾದಿಯಲ್ಲಿದ್ದಾಗ ಮಾತ್ರ ಅದು ಶುಷ್ಕ ಪಾಂಡಿತ್ಯ ಪ್ರದರ್ಶನಕ್ಕೆ ತೊಡಗಿ ಅಲಂಕಾರಮಯವಾಗಿ ಮತ್ತು ಸಂಕೀರ್ಣ ಲಕ್ಷಣಗಳಿಗೆ ಗುರಿಯಾಯಿತು. ಒಂದಾನೊಂದು ಕಾಲದಲ್ಲಿ ಅದು ಸಾಮಾನ್ಯ ಜನಗಳ ಆಡುಭಾಷೆಯಾಗಿ ಮಾತ್ರವಲ್ಲದೆ, ಇಡೀ ಭಾರತ ದೇಶದಲ್ಲಿ ವಿವಿಧ ಭಾಷೆಗಳು ಮತ್ತು ಉಪಭಾಷೆಗಳು ಪ್ರಚಲಿತವಾಗಿದ್ದಾಗ್ಯೂ ಎಲ್ಲ ಕಡೆಯಲ್ಲಿಯೂ ಸಂಪರ್ಕ ಭಾಷೆಯಾಗಿ ಮೆರೆದಿದ್ದಿತು ಎನ್ನುವ ಶ್ಲಾಘನೆಯ ಮಾತುಗಳನ್ನು ಹೇಳಬೇಕು. ಇಂದಿಗೂ ಭಾರತದಲ್ಲಿ ಕಲಿಕೆಯ ಸಾರ್ವತ್ರಿಕ ಭಾಷೆಯಾಗಿ ಸಂಸ್ಕೃತವು ಬಳಕೆಯಲ್ಲಿದ್ದು, ಪರಿಮಿತಿಯ ಅರ್ಥದಲ್ಲಿ ಸಾಹಿತ್ಯಿಕ ರಚನೆಗಳ ಮಾಧ್ಯಮವೂ ಆಗಿದೆ. ಅಷ್ಟೇ ಅಲ್ಲದೆ, ಸಂಸ್ಕೃತವು ಎಲ್ಲ ರೀತಿಯ ಶ್ರೀಮಂತ ರಚನೆಯ ಬೆಳವಣಿಗೆಗೆ ಕಾರಣವಾಗಿದ್ದಿತು. ವೈದಿಕ ಸಂಸ್ಕೃತದಿಂದ ಅಭಿಜಾತ ಸಂಸ್ಕೃತ ವಿಕಾಸಗೊಂಡಿತು

ಮತ್ತು ಇವುಗಳಿಂದ ಪಾಳಿ ಮತ್ತು ಸ್ಥಳೀಯ ಲಕ್ಷಣಗಳ ಪ್ರಾಕೃತಗಳು ಅಭಿವೃದ್ಧಿ ಹೊಂದಿದವು. ಕಾಲಕ್ರಮದಲ್ಲಿ ಇವುಗಳಿಂದ ಆಧುನಿಕ ಕಾಲದ ವಿವಿಧ ಪ್ರಾಂತೀಯ ಭಾಷೆಗಳು ವಿಕಾಸಗೊಂಡವು. ವೈದಿಕ ಸಂಸ್ಕೃತವು ಅಭಿಜಾತ ಸಂಸ್ಕೃತವಾಗಿ ವಿಕಾಸ ಹೊಂದಿದಾಗ ಸಣ್ಣ ಪುಟ್ಟ ಬದಲಾವಣೆಗಳು ವ್ಯಾಕರಣ ಮತ್ತು ಶಬ್ದಭಂಡಾರಗಳಲ್ಲಿ ಕಂಡುಬಂದವು. ಆದರೆ ಪಾಳಿ ಮತ್ತು ಪ್ರಾಕೃತಗಳು ವಿಕಾಸಗೊಂಡಾಗ ತೀವ್ರತರದ ಬದಲಾವಣೆಗಳು ಭಾಷೆಯ ಲಕ್ಷಣದಲ್ಲಿ ಉಂಟಾದವು ಎಂಬುದನ್ನು ಒತ್ತಿ ಹೇಳಬೇಕು.

ಭಾರತೀಯ ಸಂಸ್ಕೃತಿ

ಇವೆಲ್ಲವುಗಳ ಪರಿಣಾಮವೆಂದರೆ, ಸಂಸ್ಕೃತವು ಕೇವಲ ಒಂದು ಭಾಷೆಯಾಗಿ ಉಳಿಯಲಿಲ್ಲ. 'ಅದು ಒಂದು ಜನಾಂಗದ ಹಾಗೂ ಸಂಸ್ಕೃತಿಯ ಉತ್ಕೃಷ್ಟತೆಯ ಕಾವ್ಯಮಯ ಒಡಂಬಡಿಕೆಯಾಗಿ, ಒಂದು ಜೀವನ ಕ್ರಮದ ಚಿಂತನೆಯ ಮೂರ್ತರೂಪವಾಗಿ, ಅವರನ್ನು ಮುನ್ನಡೆಸುವ ಸಂಪತ್ ಸಾಧನವಾಗಿ ಹೊರಹೊಮ್ಮಿತು.[4] ಭಾರತೀಯ ಸಂಸ್ಕೃತಿ ಎಂದು ಕರೆಯಲಾಗುವ ಸರ್ವಗುಣಗಳನ್ನೂ ಅಂತರ್ಗತ ಮಾಡಿಕೊಂಡ ಒಂದು ಸಂಸ್ಕೃತಿಯನ್ನು ಅದು ಪ್ರತಿನಿಧಿಸುತ್ತದೆ. ಇಲ್ಲಿ ಅಂತರ್ಗತ ಎನ್ನುವ ಪದಕ್ಕೆ ಸಾಮಾನ್ಯವಾದ ಅರ್ಥವಿಲ್ಲ. ಇಲ್ಲಿ ಅದು ಆಧ್ಯಾತ್ಮಿಕದ ಕಡೆಗೆ ಹೆಚ್ಚು ಒತ್ತುಕೊಟ್ಟಿದ್ದು, ಅತೀಂದ್ರಿಯ ಗುಣಗಳಿಗೆ ಪ್ರಾಧಾನ್ಯ ನೀಡುತ್ತದೆ. ಶ್ರೀನಗರದಿಂದ ಕನ್ಯಾಕುಮಾರಿಯವರೆಗೆ ಅಂತರ್ಗತವಾಗಿರುವ ಎಲ್ಲ ಸಂಪತ್ತುಗಳೂ ಭಾರತೀಯ ಸಂಸ್ಕೃತಿಯಲ್ಲಿ ಸೇರಿವೆ. ಸಂಸ್ಕೃತವನ್ನು ಅಭ್ಯಾಸ ಮಾಡಿದಾಗ ಅದರಲ್ಲಿ ಎಲ್ಲೆಲ್ಲೂ ಸಂಸ್ಕೃತಿಯ ಛಾಯೆಯೇ ಕಾಣಬರುತ್ತದೆ. ಇದರಿಂದಾಗಿ ಈ ದೇಶದಲ್ಲಿ ಒಂದು ಸರ್ವಸಮ್ಮತವಾದ ಸಂಸ್ಕೃತಿಯು ಕಾಣಬರುತ್ತದೆ. ಈ ಸಂಸ್ಕೃತಿಯು ಎಷ್ಟೊಂದು ಶಕ್ತಿಶಾಲಿಯಾಗಿ ಮತ್ತು ಪ್ರಚಲಿತವಾಗಿದ್ದಿತೆಂದರೆ, ಅದು ಐದು ಸಾವಿರ ವರ್ಷಗಳಿಂದ ಜೀವಂತವಾಗಿದ್ದು ಯಾವ ಭಂಗವೂ ಇಲ್ಲದೆ ಮುಂದುವರಿಯುತ್ತಿದೆ. ಇದು ಸಂಸ್ಕೃತ ಭಾಷೆಯ ಅಸಾಧಾರಣ ವೈಶಿಷ್ಟ್ಯವಾಗಿದ್ದು, ಸಂಸ್ಕೃತಿ ಎನ್ನುವ ಪದವೇ ಅದನ್ನು ಸೂಚಿಸುತ್ತದೆ.

* * * *

೨. ಸಂಸ್ಕೃತದಲ್ಲಿ ವಿಜ್ಞಾನ

ಪ್ರಾಚೀನ ಕಾಲದಲ್ಲಿ ಸಂಸ್ಕೃತವು ವೈಜ್ಞಾನಿಕ ಚಿಂತನೆಗಳ ಪರಿಣಾಮಕಾರಿಯಾದ ಮಾಧ್ಯಮವಾಗಿತ್ತು ಮತ್ತು ಕಲೆ, ತತ್ತ್ವಶಾಸ್ತ್ರ, ಧರ್ಮ, ಕಾನೂನು ಮುಂತಾದವುಗಳ ಜೊತೆಗೆ ವಿಜ್ಞಾನವನ್ನು ಕುರಿತಾದ ಸಾಹಿತ್ಯ ಗ್ರಂಥಗಳು ಸಂಸ್ಕೃತದಲ್ಲಿ ಹೇರಳವಾಗಿವೆಯೆಂದು ಅನೇಕರಿಗೆ ತಿಳಿದಿಲ್ಲ. ಗಣಿತಶಾಸ್ತ್ರ, ಖಗೋಳಶಾಸ್ತ್ರ, ತರ್ಕ ಮತ್ತು ತತ್ವಶಾಸ್ತ್ರ ಹಾಗೂ ಭೌತ ಮತ್ತು ವೈದ್ಯ ವಿಜ್ಞಾನಗಳಿಗೆ ಈ ಮಾತು ವಿಶೇಷವಾಗಿ ಅನ್ವಯಿಸುತ್ತದೆ.

ಸಂಸ್ಕೃತದಲ್ಲಿ ತರ್ಕಶಾಸ್ತ್ರ[5]

ಸಂಸ್ಕೃತ ಅಥವಾ ಹಿಂದೂ ತರ್ಕಶಾಸ್ತ್ರ ಒಂದು ವಿಶೇಷ ವಿಜ್ಞಾನವಾಗಿ ಬಹಳ ಔನ್ನತ್ಯದ ಬೆಳವಣಿಗೆಯನ್ನು ಸಾಧಿಸಿದ್ದು, ನ್ಯಾಯ ಹಾಗೂ ವೈಶೇಷಿಕಗಳನ್ನು ಒಳಗೊಂಡಿತ್ತು. ಪ್ರಾಚೀನ ಕಾಲದಲ್ಲಿ ಅನ್ವೀಕ್ಷಿಕೀ ಎಂಬ ಹೆಸರಿನಿಂದ ಆರಂಭಗೊಂಡು, ಆನಂತರ ನ್ಯಾಯಶಾಸ್ತ್ರವೆಂಬ ಹೆಸರು ಪಡೆಯಿತು (ಕ್ರಿ.ಪೂ. 650–100 ಕ್ರಿ.ಶ.). ಮಧ್ಯಯುಗದಲ್ಲಿ (ಕ್ರಿ.ಶ. 1200ರವರೆಗೆ) ನಿಖರವಾದ ಜ್ಞಾನವನ್ನು ಕುರಿತಾದ ಪ್ರಮಾಣಶಾಸ್ತ್ರವೆಂದೆನಿಸಿತು. ಇದರಲ್ಲಿ ಪ್ರತ್ಯಕ್ಷ ಮತ್ತು ಅನುಮಾನಗಳು ಸೇರಿದ್ದವು. ಕ್ರಿ.ಶ. 900ರಿಂದ ಆಧುನಿಕ ತರ್ಕವೆಂದು ಹೆಸರು ಪಡೆದಿದ್ದು, ಈಗ ತರ್ಕಶಾಸ್ತ್ರ ಅಂದರೆ, ಜಿಜ್ಞಾಸೆಯ ವಿಜ್ಞಾನವೆಂದು ಪ್ರಸಿದ್ಧಿಗೆ ಬಂದಿದೆ. ಈ ಗ್ರಂಥಗಳಲ್ಲಿ ಅನೇಕ ತಾಂತ್ರಿಕ ಪದಗಳಿದ್ದು, ಅವುಗಳಿಗೆ ಸೂಕ್ಷ್ಮವಾದ ನಿರೂಪಣೆಗಳನ್ನು ಹಾಗೂ ವರ್ಗೀಕರಣಗಳನ್ನು ಸೇರಿಸಲಾಗಿದೆ. ಐದು ಭಾಗಗಳನ್ನು ಹೊಂದಿದ (ಅವಯವ) ವಾಕ್ಯಕ್ರಮವನ್ನು ಇಲ್ಲಿ ಕೊಡಲಾಗಿದೆ. ವಿಶೇಷವಾಗಿ ಅರಿಸ್ಟಾಟಲ್‌ನ ನ್ಯಾಯಸರಣಿಯೂ ಇದರಲ್ಲಿದೆ. ಭಾರತೀಯ ತರ್ಕಶಾಸ್ತ್ರದಲ್ಲಿ, ಧಾರ್ಮಿಕ ಅಥವಾ ತತ್ತ್ವಶಾಸ್ತ್ರೀಯ ಆಧಾರವನ್ನು ನೀಡುವ ಪ್ರವೃತ್ತಿ ಯಾವಾಗಲೂ ಕಂಡುಬರುತ್ತದೆ. ಇದನ್ನು ಹೊರತುಪಡಿಸಿದರೆ, ಈ ನಿರೂಪಣೆಗಳಲ್ಲಿ ವಿಶೇಷವಾದ ವೈಜ್ಞಾನಿಕ ಅಂಶಗಳು ಇರುವುದು ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಅನ್ನಂಭಟ್ಟನಿಂದ ರಚಿತವಾದ ತರ್ಕ ಸಂಗ್ರಹ (ತರ್ಕಶಾಸ್ತ್ರದ ಪಠ್ಯಪುಸ್ತಕ)ವನ್ನು ಹೆಸರಿಸಬೇಕು. ಈ ಪುಸ್ತಕದಲ್ಲಿ[6] ಮುಖ್ಯವಾಗಿ ವಸ್ತುಗಳನ್ನು ಮೂರು ವಿಭಾಗಗಳಾಗಿ

ವಿಂಗಡಿಸಲಾಗಿದೆ; ಅವೇ ಭೌತ, ಮನಶ್ಶಾಸ್ತ್ರೀಯ ಮತ್ತು ಸಾಮಾಜಿಕ ವಿಭಾಗಗಳು. ಪಟ್ಟಿ 1ರಲ್ಲಿ ದಿ. ಕುಪ್ಪುಸ್ವಾಮಿಶಾಸ್ತ್ರಿಗಳು ಅನುವಾದಿಸಿದ ಮೂರು ಪದ್ಯಗಳನ್ನು ನೀಡಿ (ಅನುವಾದ ಅ) ಅದರ ಪಕ್ಕದಲ್ಲಿ ನಮ್ಮದೇ ಅನುವಾದವನ್ನು[7] (ಅನುವಾದ ಆ) ಈಗಿನ ವೈಜ್ಞಾನಿಕ ಪದಗಳಲ್ಲಿ ನೀಡಿದ್ದೇವೆ. ಇದರಿಂದ ತಿಳಿದುಬರುವ ಮುಖ್ಯ ಅಂಶವೇನೆಂದರೆ ಕುಪ್ಪುಸ್ವಾಮಿಶಾಸ್ತ್ರಿಗಳು ಭೌತ ಅರ್ಥವನ್ನು ನೀಡದೆ ತತ್ತ್ವಶಾಸ್ತ್ರೀಯ ಅರ್ಥವನ್ನು ನೀಡಿರುವುದು. ಉದಾಹರಣೆಗೆ ನಾವು ದ್ರವ್ಯ, ಗುಣ ಮತ್ತು ಕರ್ಮ ಎಂಬ ಪದಗಳನ್ನು ವಸ್ತು, ಗುಣ ಮತ್ತು ಕಾರ್ಯ ಎಂದು ಅನುವಾದ ಮಾಡದೆ, ಕ್ರಮವಾಗಿ ಅವುಗಳನ್ನು ಮ್ಯಾಟರ್, ಪ್ರಾಪರ್ಟಿ ಮತ್ತು ಡೈನಾಮಿಕ್ಸ್ ಎಂದು ಅನುವಾದ ಮಾಡಿದರೆ ಈ ಪುಸ್ತಕವು ಆಧುನಿಕ ಕಾಲದ ಭೌತಶಾಸ್ತ್ರದ ಪುಸ್ತಕದಂತೆ ಕಾಣುತ್ತದೆ. ಇದೇ ರೀತಿಯಲ್ಲಿ ಉತ್ಕ್ಷೇಪಣ ಮತ್ತು ಅವಕ್ಷೇಪಣಗಳು 'ಡೈರೆಕ್ಟೆಡ್ ಮೋಷನ್' ಆಗಿ ಕಾಣುತ್ತವೆ. ಗಮನಾನಿ ಎಂಬುದು ಕೈನೆಟಿಕ್ ಥೀರಿಯಲ್ಲಿ ಕಂಡುಬರುವ 'ರ್‍ಯಾಂಡಮ್ ಮೋಷನ್' ಆಗಿ ಕಾಣುತ್ತದೆ. ಹಾಗೆಂದ ಮಾತ್ರಕ್ಕೆ ಅನ್ನಂಭಟ್ಟನಿಗೆ ಕೈನೆಟಿಕ್ ಸಿದ್ಧಾಂತದ ಎಲ್ಲ ವಿಷಯಗಳೂ ತಿಳಿದಿದ್ದಿತು ಎಂದು ಅಭಿಪ್ರಾಯವಲ್ಲ. ಅವನಿಗೆ ಅದು ಗೊತ್ತಿದ್ದಿರಬಹುದು ಅಥವಾ ಗೊತ್ತಿಲ್ಲದೇ ಇರಬಹುದು. ಆದರೆ ಇವು ಆ ರೀತಿಯ ಚಲನೆಗಳಾಗಿದ್ದು (ಮೋಷನ್) ಅವುಗಳಿಗೆ ನಿರೂಪಣೆ ನೀಡಲಾಗಿದ್ದು, ಅವುಗಳಿಗೆ ಈಗ ನಾವು ಆಧುನಿಕ ವ್ಯಾಖ್ಯೆಯನ್ನು ನೀಡಬಹುದಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಕಂಡುಬರುವ ವಿಷಯಗಳಿಗೆ ಕೇವಲ ತತ್ತ್ವಶಾಸ್ತ್ರೀಯ ಅರ್ಥವನ್ನು ನೀಡುವುದರ ಬದಲು, ವಿದ್ವಾಂಸರು ಇವುಗಳನ್ನು ಆಧುನಿಕ ರೀತಿಯಲ್ಲಿ ಗಮನಿಸಿ, ವೈಜ್ಞಾನಿಕ ವ್ಯಾಖ್ಯೆಗಳನ್ನು ನೀಡಬೇಕಾದ ಆವಶ್ಯಕತೆ ಇದೆ.

ಸಂಸ್ಕೃತದಲ್ಲಿ ಗಣಿತಶಾಸ್ತ್ರ

ಭಾರತದಲ್ಲಿ ಗಣಿತಶಾಸ್ತ್ರಕ್ಕೆ ದೀರ್ಘವಾದ ಹಾಗೂ ಶ್ರೇಷ್ಠ ಹಂತದ ಇತಿಹಾಸವಿದೆ. ಸಾಮಾನ್ಯವಾಗಿ ಇವುಗಳು ಸಂಕ್ಷಿಪ್ತ ಗದ್ಯ ಹಾಗೂ ಪ್ರಾಸಯುಕ್ತ ಪದ್ಯಗಳ ಲಕ್ಷಣಗಳನ್ನೊಳಗೊಂಡ ಸಂಸ್ಕೃತ ಶ್ಲೋಕಗಳಲ್ಲಿ ಕಂಡು ಬರುತ್ತವೆ. ಈ ಕೆಳಗೆ ಕೆಲವು ಉದಾಹರಣೆಗಳನ್ನು ನೀಡಲಾಗಿದೆ.

ಪೈಥಾಗೊರಸ್‌ನ ಪ್ರಮೇಯವು ಎಲ್ಲ ಶುಲ್ಬಸೂತ್ರಗಳಲ್ಲಿ ವಿವರಿಸಲ್ಪಟ್ಟಿದೆ. ಬೌಧಾಯನನು (ಕ್ರಿ.ಪೂ. 600–500) ನೀಡಿರುವ ನಿರೂಪಣೆ ಹೀಗಿದೆ[8]:

ದೀರ್ಘಚತುರಸ್ರಸ್ಯಾಕ್ಷ್ಣಯಾರಜ್ಜುಃ ಪಾರ್ಶ್ವಮಾನೀ ತಿರ್ಯಙ್ಮಾನೀ ಚ
ಯತ್ಪೃಥಗ್ಭೂತೇ ಕುರುತಸ್ತದುಭಯಂ ಕರೋತಿ ॥

ಒಂದು ಚತುರ್ಭುಜಾಕೃತಿಯ ಕರ್ಣರೇಖೆಯು ಎರಡು ಭುಜಗಳಿಂದ ತಾನೇ ಎರಡು ಭಾಗಗಳನ್ನು ಸೃಷ್ಟಿಸುತ್ತದೆ.

ಕೆಲವು ಸೂತ್ರಕಾರರು ಕೊಟ್ಟಿರುವ ಸಂಖ್ಯೆಯ ಸೂತ್ರಗಳಿಂದ ಸುಮಾರಾಗಿ ಕರಣೀಗತ ಸಂಖ್ಯೆಗಳಾದ $\sqrt{2}$ (ದ್ವಿಕರಣೀ) ಮತ್ತು $\sqrt{3}$ (ತ್ರಿಕರಣೀ)ಗಳ ಮೌಲ್ಯವನ್ನು ತಿಳಿಯಬಹುದು. ಬೌಧಾಯನ ಮತ್ತು ಆಪಸ್ತಂಬ (ಕ್ರಿ.ಪೂ. 500–400ರ ಪ್ರಕಾರ[9]:

ಪ್ರಮಾಣಂ ತೃತೀಯೇನ ವರ್ಧಯೇತ್ತಚ್ಚ ಚತುರ್ಥೇನಾತ್ಮ–
ಚತುಸ್ತ್ರಿಂಶೋನೇನ ಸವಿಶೇಷಃ ॥

ಮತ್ತು ಕಾತ್ಯಾಯನನ ಪ್ರಕಾರ (ಕ್ರಿ.ಪೂ. 400–300)[10]

ಕರಣೀಂ ತೃತೀಯೇನ ವರ್ಧಯೇತ್ತಚ್ಚ
ಸ್ವಚತುರ್ಥೇನಾತ್ಮ ಚತುಸ್ತ್ರಿಂಶೋನೇನ ಸವಿಶೇಷಃ ಇತಿ ವಿಶೇಷಃ ॥

‘ಒಂದು ಮೊತ್ತವನ್ನು ಅದರ ಮೂರನೆಯ ಒಂದು ಭಾಗದಿಂದ ಹೆಚ್ಚಿಸಿರಿ; ಈ ಮೂರನೆಯದರ ನಾಲ್ಕನೆಯ ಒಂದು ಭಾಗವನ್ನು ಸೇರಿಸಿ; ಆ ನಾಲ್ಕನೆಯ ಭಾಗದ ಮೂವತ್ತನಾಲ್ಕನೆಯ ಒಂದು ಭಾಗವನ್ನು ಕಳೆಯಿರಿ. ಈ ಹೆಚ್ಚಿದ ಮೊತ್ತದ ಹೆಸರೇ ಸವಿಶೇಷ.’

ಒಂದು ಚೌಕಾಕೃತಿಯ ಒಂದು ಪಾರ್ಶ್ವವನ್ನು ತೆಗೆದುಕೊಂಡರೆ ಅದನ್ನು ಈ ರೀತಿ ವಿವರಿಸಬಹುದು.

$\sqrt{2}$ =1 + 1/3 + 1/3 = 1/3.4.34 = 1.4142156

ಮತ್ತು

$\sqrt{3}$=1 + 2/3 + 1/3.5 - 1/3.5.52 = 1.7320513

ಪ್ರಸ್ತುತ ಮೌಲ್ಯ: $\sqrt{2}$=1.41423562 .....ಮತ್ತು

$\sqrt{3}$ = 1.7320508.....

ವೃತ್ತದ ಜ್ಯಾಮಿತಿಯನ್ನು ವಿವರಿಸುವಾಗ ಮೊದಲನೆಯ ಆರ್ಯಭಟನು (ಕ್ರಿ.ಶ. 5ನೆಯ ಶತಮಾನ) ಪೈ ಮೌಲ್ಯವನ್ನು ಈ ಶ್ಲೋಕದಲ್ಲಿ ಕೊಟ್ಟಿದ್ದಾನೆ.[11]

ಅದು ನಾಲ್ಕು ದಶಮಾಂಶದವರೆಗೆ ಸರಿಯಾಗಿರುವುದು ಗಮನಾರ್ಹ.

ಚತುರಧಿಕಂ ಶತಮಷ್ಟಗುಣಂ ದ್ವಾಷಷ್ಟಿಸ್ತಯಾ ಸಹಸ್ರಾಣಾಂ।
ಅಯುತದ್ವಯವಿಷ್ಕಂಭಸ್ಯಾಸನ್ನೋ ವೃತ್ತಪರಿಣಾಹಃ ॥

‘20,000 ಅಡಿಗಳ ವ್ಯಾಸವನ್ನುಳ್ಳ ವೃತ್ತದ ಸುತ್ತಳತೆಯು ಸುಮಾರಾಗಿ ನೂರಕ್ಕೆ ನಾಲ್ಕನ್ನು ಸೇರಿಸಿ, ಎಂಟರಿಂದ ಗುಣಿಸಿ, 62,000 ಸೇರಿಸಿದರೆ ಆಗುವಷ್ಟು ಆಗುತ್ತದೆ.’ ಇದರಿಂದ ಪೈ = ಸುತ್ತಳತೆ/ ವ್ಯಾಸ=62,832/20,000=3.1416 ಪೈನ ಈ ಮೌಲ್ಯವು ಇದಕ್ಕಿಂತ ಪ್ರಾಚೀನವಾದ ಯಾವ ಗಣಿತಶಾಸ್ತ್ರ ಗ್ರಂಥಗಳಲ್ಲಿಯೂ ದೊರಕುವುದಿಲ್ಲ. ಮೊದಲನೆಯ ಆರ್ಯಭಟನು ಈ ಮೌಲ್ಯವನ್ನು ಸುಮಾರು ಹತ್ತಿರದ್ದು (ಆಸನ್ನ) ಎಂದು ಹೇಳಿರುವುದನ್ನು ಗಮನಿಸಬೇಕು. ಶಂಕರವರ್ಮನಿಂದ ಕ್ರಿ.ಶ. ಹತ್ತೊಂಬತ್ತನೆಯ ಶತಮಾನದಲ್ಲಿ ಖಗೋಳ ವಿಜ್ಞಾನವನ್ನು ಕುರಿತಾದ ಸದ್ರತ್ನಮಾಲಾ ಎಂಬ ಗ್ರಂಥದಲ್ಲಿ ಪೈ ಮೌಲ್ಯವನ್ನು ಹದಿನೇಳು ದಶಮಾಂಶಗಳಿಗನುಗುಣವಾಗಿ ಕೊಟ್ಟಿದ್ದಾನೆ.[12] ಅವನು ಹೇಳುತ್ತಾನೆ: “ಈ ರೀತಿ ಒಂದು ದೊಡ್ಡ ವೃತ್ತದ ವ್ಯಾಸವು ಒಂದು ಪರಾರ್ಧವಾದರೆ (10^{17}), ಅದರ ಸುತ್ತಳತೆಯು 314159265358979324 ಆಗುತ್ತದೆ.’ ಆದುದರಿಂದ ಪೈ = 3.14159265358979324.

ಮೇಲಿನ ಕೆಲವು ಸೂತ್ರಗಳು ತತ್ಪೂರ್ತವಾಗಿ ಕೆಲವು ಮೂಲಭೂತ ನಿಯತಾಂಕಗಳ ಮೌಲ್ಯವನ್ನು ತಿಳಿಸುತ್ತವೆ. ಆದರೆ ಅವುಗಳ ಮೂಲಪುರುಷರು ಈ ಮೌಲ್ಯಗಳನ್ನು ಯಾವ ರೀತಿ ಪಡೆದರು ಎಂಬುದನ್ನು ತಿಳಿಸಿಲ್ಲ. ಇವುಗಳನ್ನು ನಮ್ಮ ಪೂರ್ವಿಕರು ಆಧ್ಯಾತ್ಮಿಕ ರಹಸ್ಯ ವಿದ್ಯೆಯಿಂದ ಪಡೆದರೆಂದು ಕೆಲವರು ಭಾವಿಸಿದರೆ ಮತ್ತು ಕೆಲವರು ಅದನ್ನೇ ನಂಬುತ್ತಾರೆ. ಆದರೆ ಇವುಗಳ ಹಿಂದೆ ಖಚಿತವಾದ ನಿರ್ದುಷ್ಟ ಜ್ಞಾನವಿದ್ದಿತೆಂಬುದು ನಂಬಲರ್ಹ ವಿಷಯ. ಬಹುಶಃ ಇವುಗಳನ್ನು ಅವರು ದಾಖಲಿಸಿರಲಾರರು ಅಥವಾ ಅವರ ದಾಖಲೆಗಳು ಹಾಳಾಗಿ ನಮಗೆ ಉಪಲಬ್ಧವಾಗಿರದೇ ಹೋಗಿರಬಹುದು.

ಭಾರತದಲ್ಲಿ ಗಣಿತಶಾಸ್ತ್ರದ ನಿಯಮಗಳು ಪ್ರಮಾಣವಿಲ್ಲದವುಗಳಾಗಿದ್ದವು ಎಂಬ ತಪ್ಪು ಕಲ್ಪನೆ ಓದುಗರಲ್ಲಿ ಉಂಟಾಗಬಾರದು. ಗಣಿತಶಾಸ್ತ್ರದ ಅನೇಕ ಗ್ರಂಥಗಳಲ್ಲಿ ಪ್ರಮೇಯಗಳನ್ನು ನೀಡಿರುವುದಲ್ಲದೆ, ಅವುಗಳನ್ನು ಯಾವ ರೀತಿ ಸಾಧಿಸಿದರು ಎನ್ನುವುದನ್ನೂ ಪ್ರಸ್ತುತ ಪಡಿಸಲಾಗಿದೆ. ಉದಾಹರಣೆಗೆ ಬ್ರಹ್ಮಗುಪ್ತನ ಲೆಮ್ಮ (ಭಾವನಾ). ಇದರಲ್ಲಿ ಎರಡನೆಯ ಹಂತದಲ್ಲಿ (ವರ್ಗ ಪ್ರಕೃತಿ) ಅನಿರ್ದಿಷ್ಟ ಸಮೀಕರಣವಿರುವುದು ಕಾಣಬರುತ್ತದೆ (ಇದು $NX^2 \pm K = y^2$. ಇದರಲ್ಲಿ ಕೊಎಫಿಷಿಯೆಂಟ್ N ಎಂಬುದು ಗುಣಕ ಪ್ರಕೃತಿ, X ಅಂದರೆ ಕನಿಷ್ಠ ಪದ ಹ್ರಸ್ವಮೂಲ ಅಥವಾ ಆದ್ಯಮೂಲ; Y = ಜ್ಯೇಷ್ಠಪದ; ಜ್ಯೇಷ್ಠಮೂಲ ಅಥವಾ ಅನ್ಯಮೂಲ; K = ಕ್ಷೇಪ, ಪ್ರಕ್ಷೇಪ ಅಥವಾ ಪ್ರಕ್ಷೇಪಕ). ಇದನ್ನು ಹೀಗೆ ಹೇಳಿದೆ:[13]

ಮೂಲಂ ದ್ವಿಧೇಷ್ಟವರ್ಗಾತ್ ಗುಣಕ ಗುಣಾದಿಷ್ಟಯುತ ವಿಹೀನಾಚ್ಚ।
ಆದ್ಯವಧೋ ಗುಣಕಗುಣಃ ಸಹಾನ್ತ್ಯಘಾತೇನ ಕೃತಮಸ್ತ್ಯಂ ॥

ವಜ್ರವಧೈಕ್ಯಂ ಪ್ರಥಮಂ ಪ್ರಕ್ಷೇಪಃ ಕ್ಷೇಪವಧತುಲ್ಯಃ।
ಪ್ರಕ್ಷೇಪಶೋಧಕಹೃತೇ ಮೂಲೇ ಪ್ರಕ್ಷೇಪಕೇ ರೂಪೇ॥

ಯಾವುದಾದರೂ ಒಂದು ಸಂಖ್ಯೆಯ ವರ್ಗದ ಮೊತ್ತಕ್ಕೆ ಇನ್ನೊಂದು ಸಂಖ್ಯೆಯನ್ನು ಸೇರಿಸಿದರೆ ಅಥವಾ ಕಳೆದರೆ, ಆ ಸಂಖ್ಯೆಯ ಗುಣಾಕಾರವು ವರ್ಗಮೂಲವನ್ನು ಸೂಚಿಸುತ್ತದೆ (ಇದನ್ನು ಎರಡು ಸಾರಿ ಮಾಡಿ ಒಂದರ ಕೆಳಗೆ ಇನ್ನೊಂದು ಬರೆಯಬೇಕು). ಮೊದಲ ಎರಡರ ಅಥವಾ ಕಡಿಮೆ ವರ್ಗವನ್ನು ಗುಣಿಸಿ ಅದನ್ನು ಕೊನೆಯ ಅಥವಾ ಹೆಚ್ಚಿನ ವರ್ಗಕ್ಕೆ ಸೇರಿಸಿದರೆ, ಅದು ಕಡೆಯ ವರ್ಗ ಅಥವಾ ಹೆಚ್ಚಿನ ವರ್ಗವಾಗುತ್ತದೆ. ಮೊದಲನೆಯ ಮತ್ತು ಕೊನೆಯ ವರ್ಗಗಳನ್ನು ಸೇರಿಸಿದಾಗ ಉಂಟಾಗುವ ಮೊತ್ತವು, ಮೊದಲನೆಯ ವರ್ಗವನ್ನು ಕೊಡುತ್ತದೆ. ಅದೇ ರೀತಿಯಲ್ಲಿ ಒಂದು ಇಂಟರ್‌ಪೊಲೇಟರ್ ಇನ್ನೆರಡು ಇಂಟರ್ ಪೊಲೇಟರ್‌ಗಳಿಗೆ ಅವಕಾಶ ಮಾಡಿಕೊಡುತ್ತದೆ. ಇಂಟರ್ ಪೊಲೇಟರ್‌ಗಳ ಏಕತೆಯು ವರ್ಗಮೂಲದ ಇಂಟರ್‌ಪೊಲೇಟರ್‌ಗಳನ್ನು ವಿಭಾಗಿಸುತ್ತದೆ. ಈ ರೀತಿಯ ಸೂತ್ರಗಳು ಅನಂತರದಲ್ಲಿ ಪೆಲಿಯನ್ ಸೂತ್ರ ಎಂದು ಪ್ರಸಿದ್ಧಿ ಪಡೆದಿವೆ. ಜಾನ್ ಪೆಲ್ ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಜೀವಿಸಿದ್ದನು. ಅವನಿಗಿಂತ ಒಂದು ಸಾವಿರ ವರ್ಷಗಳ ಮುಂಚಿತವಾಗಿ ಈ ರೀತಿಯ ಸೂತ್ರಗಳು ಬಹಳ ಖಚಿತವಾದ ಅಭಿಪ್ರಾಯಗಳೊಂದಿಗೆ ಭಾರತದಲ್ಲಿ ಪ್ರಚಲಿತವಾಗಿದ್ದವು. ಆನಂತರ ಇಮ್ಮಡಿ ಭಾಸ್ಕರನು (ಕ್ರಿ.ಶ. 12ನೆಯ ಶತಮಾನ) ಎರಡನೆಯ ಹಂತದ ಸೂತ್ರವನ್ನು ಪ್ರಸ್ತಾಪಿಸಿ, ಅದನ್ನು ಚಕ್ರವಾಲ ಎಂದು ಹೆಸರಿಸಿದ್ದಾನೆ.[14]

ಹ್ರಸ್ವಜ್ಯೇಷ್ಠ ಪದಕ್ಷೇಪಾನ್ ಭಾಜ್ಯಪ್ರಕ್ಷೇಪಭಾಜಕಾನ್।
ಕೃತ್ವಾ ಕಲ್ಪ್ಯೋ ಗುಣಸ್ತತ್ರ ತಥಾ ಪ್ರಕೃತಿತಶ್ಚ್ಯುತೇ॥

ಗುಣವರ್ಗೇ ಪ್ರಕೃತ್ಯೋನೇಽಥವಾಲ್ಪಂ ಶೇಷಕಂ ಯಥಾ।
ತತ್ ತು ಕ್ಷೇಪಹೃತಂ ಕ್ಷೇಪೋ ವ್ಯಸ್ತಃ ಪ್ರಕೃತಿತಶ್ಚ್ಯುತೇ॥

ಗುಣಲಬ್ಧಿಃ ಪದಂ ಹ್ರಸ್ವಂ ತತೋ ಜ್ಯೇಷ್ಠಮತೋಽಸಕೃತ।
ತ್ಯಕ್ತ್ವಾ ಪೂರ್ವಪದಕ್ಷೇಪಾಂಶ್ಚಕ್ರವಾಲಮಿದಂ ಜಗುಃ॥

ಸಣ್ಣ ವರ್ಗ ಮತ್ತು ದೊಡ್ಡ ವರ್ಗ ಮತ್ತು ಇಂಟರ್‌ಪೊಲೇಟರ್‌ಗಳನ್ನು ಭಾಜ್ಯಾಂಶ, ಕೂಡಿರುವ ಮೊತ್ತ ಹಾಗೂ ಶೇಷವಿಲ್ಲದಂತೆ ಮತ್ತೊಂದು ಸಂಖ್ಯೆಯನ್ನು ಭಾಗ ಮಾಡುವ ಸಂಖ್ಯೆ ಎಂದು ಪರಿಗಣಿಸಬೇಕು (ಕುಟ್ಟಕದಲ್ಲಿರುವಂತೆ). ಗುಣಕವನ್ನು

ಆರಿಸಿಕೊಂಡು, ಅದರ ವರ್ಗ ಮತ್ತು ಪ್ರಕೃತಿಯನ್ನು ಕಳೆದರೆ ಅಥವಾ ಹಿಂದುಮುಂದು ಮಾಡಿದರೆ, ಅದೇ ಸಣ್ಣದಾಗುತ್ತದೆ. ಇದನ್ನು ಇಂಟರ್‌ಪೊಲೇಟರ್‌ನಿಂದ ವಿಭಾಗಿಸಿದರೆ ಅದು ಹೊಸ ಸೂತ್ರದ ಇಂಟರ್‌ಪೊಲೇಟರ್ ಆಗುತ್ತದೆ. ಈ ಗುಣಕದ ವರ್ಗವನ್ನು ಪ್ರಕೃತಿಯಿಂದ ಕಳೆದರೆ, ಅದರ ಚಿಹ್ನೆಯು ತಿರುಗು ಮುರುಗಾಗುತ್ತದೆ. ಕುಟ್ಟಕದ ಭಾಗಲಬ್ಧವು ಗುಣಕದೊಂದಿಗೆ ಸೇರಿದರೆ, ಅದೇ ಸಣ್ಣ ಮೂಲಸಂಖ್ಯೆಯಾಗುತ್ತದೆ. ಇದರಿಂದ ದೊಡ್ಡ ಸಂಖ್ಯೆಯು ದೊರಕುತ್ತದೆ. ಮೊದಲು ಹೆಸರಿಸಿದ ಮೂಲಸಂಖ್ಯೆಯನ್ನು ಮತ್ತು ಇಂಟರ್‌ಪೊಲೇಟರ್ ಅನ್ನು ಪಕ್ಕಕ್ಕೆ ಸರಿಸಿದರೆ, ಮತ್ತು ಅದನ್ನು ಪುನರಾವರ್ತನೆ ಮಾಡಿದರೆ, ಅದನ್ನೇ ಚಕ್ರವಾಲ ಎಂದು ಕರೆಯಲಾಗುತ್ತದೆ.

ಇದರಿಂದ ಈ ಸೂತ್ರವನ್ನು ಹೀಗೆ ಬಿಡಿಸಬಹುದು.

$$Na^2 + K = b^2$$

ಸೂತ್ರ ಹೀಗಿದೆ:

$$N\left(\frac{am+b}{K}\right)^2 + \frac{m^2-N}{K} = \left(\frac{bm+Na}{K}\right)^2$$

ಈ ಮೇಲಿನದರಲ್ಲಿ m ಎನ್ನುವುದು ಕುಟ್ಟಕವು ನಿರ್ಧರಿಸಿದಂತೆ ಗುಣಕ ಮಾರ್ಗ. ಆದುದರಿಂದ m^2-N ಎನ್ನುವುದು ಕನಿಷ್ಠವಾಗಿದ್ದು, $am+b$, K ಇಂದ ಭಾಗಿಸಲ್ಪಡುತ್ತದೆ;

ಭಾಗಾಂಶ, $\left(\frac{am+b}{K}\right)$ ಎನ್ನುವುದು ಸಣ್ಣ ಮೂಲವಾಗುತ್ತದೆ. ಮೇಲಿನ ಮೊದಲನೆಯ ನಿಯಮದಲ್ಲಿ ಹೇಳಿರುವಂತೆ ಚಿಕ್ಕ ಮೂಲ a ಯನ್ನು ಡಿವಿಡೆಂಡ್ (ಭಾಜ್ಯಾಂಶ) ಆಗಿಯೂ, ದೊಡ್ಡ ಮೂಲ b ಯನ್ನು ಹೆಚ್ಚಿನ ಮೊತ್ತವಾಗಿಯೂ ಮತ್ತು ಇಂಟರ್‌ಪೊಲೇಟರ್ K ಯನ್ನು ಭಾಜ್ಯವಾಗಿ ಪರಿಗಣಿಸಬಹುದು.

ಇಮ್ಮಡಿ ಭಾಸ್ಕರನ ಚಕ್ರವಾಲ ಅಥವಾ ಆವರ್ತಕ ಮಾರ್ಗವನ್ನು ಕುರಿತು ಅತ್ಯಂತ ಶ್ರೇಷ್ಠ ಭೌತಶಾಸ್ತ್ರ ಹಾಗೂ ಗಣಿತಶಾಸ್ತ್ರ ವಿದ್ವಾಂಸ ಹ್ಯಾಂಕೆಲ್ ಹೀಗೆ ಹೇಳಿದ್ದಾರೆ: 'ಲಾಗ್ರೇಂಜ್‌ಗಿಂತ ಮುಂಚೆ ಸಂಖ್ಯೆಯ ಸಿದ್ಧಾಂತದಲ್ಲಿ ಇವನಷ್ಟು ಶ್ರೇಷ್ಠತೆಯನ್ನು ಸಾಧಿಸಿದವರು ಯಾರೂ ಇಲ್ಲ.'

ಮೊದಲನೆಯ ಆರ್ಯಭಟನು ಒಂದು ನಕ್ಷತ್ರವು ಮಧ್ಯಾಹ್ನ ರೇಖೆಯನ್ನು ಒಮ್ಮೆ ಹಾದಂದಿನಿಂದ ಮತ್ತೊಮ್ಮೆ ಭೂಮಿಯ ಅಕ್ಷದ ಮೇಲೆ ಹಾಯುವುದಕ್ಕೆ ತೆಗೆದುಕೊಳ್ಳುವ ಸಮಯವನ್ನು ಕೊಟ್ಟಿದ್ದಾನೆ. ಆಶ್ಚರ್ಯಕರ ರೀತಿಯಲ್ಲಿ ಅದು ಆಧುನಿಕ ವಿಜ್ಞಾನಿಗಳು ನೀಡಿರುವ ಸಮಯಕ್ಕೆ ಅತೀ ಹತ್ತಿರದಲ್ಲಿದೆ. ಭೂಮಿಯು

ಒಂದು ಯುಗದಲ್ಲಿ ತನ್ನ ಪೂರ್ವಾಭಿಮುಖವಾಗಿ ತಿರುಗುವುದರ ಸಂಖ್ಯೆಯಿಂದ ಇದನ್ನು ಹೊಂದಿಸಿಕೊಂಡು ಕೆಳಗಿನ ಶ್ಲೋಕದ ಭಾಗದಲ್ಲಿ ನೀಡಿದ್ದಾನೆ.[15]

ಯುಗ.................ಕು ಜ಼ಿಶಿವುಣ್ಣೃಷ್ಣ ಪ್ರಾಕ್ ।

ಒಂದು ಯುಗದಲ್ಲಿ ಭೂಮಿಯ ಪೂರ್ವಾಭಿಮುಖ ಚಲನೆಯು 1, 58, 22, 37, 500. ಆದುದರಿಂದ ನಾಕ್ಷತ್ರಿಕ ಭೂಮಿಯ ಚಲನೆಯ ಕಾಲ

= 1577917500 / 1582237500 ದಿವಸಗಳು

= $23^h\ 56^m\ 4^s.1$

ಆಧುನಿಕ ಲೆಕ್ಕಾಚಾರದಂತೆ ಈ ಕಾಲವು = $23^h\ 56^m\ 4^s.091$ ಆಗಿದೆ. ಇಲ್ಲಿ ನೀಡಿರುವ ಸಂಖ್ಯೆಗಳ ಮೌಲ್ಯವನ್ನು ಮೊದಲನೆಯ ಆರ್ಯಭಟನು ಹಿಂದಿನ ಪದ್ಯದಲ್ಲಿ ನೀಡಿರುವುದರಿಂದ ಆರಿಸಿಕೊಂಡು ವರ್ಣನಾತ್ಮಕವಾಗಿ ಸಂಖ್ಯೆಗಳನ್ನು ನಿರ್ಧರಿಸುವ ಕ್ರಮ ಅನುಸರಿಸಲಾಗಿದೆ.[16]

ವರ್ಗಾಕ್ಷರಾಣಿ ವರ್ಗೇಽ ವರ್ಗೇಽ ವರ್ಗಾಕ್ಷರಾಣಿ ಕಾತ್ ಙಮೌ ಯಃ।
ಖದ್ವಿನವಕೇ ಸ್ವರಾ ನವ ವರ್ಗೇಽ ವರ್ಗೇ ನವಾನ್ತ್ಯವರ್ಗೇ ವಾ॥

ಮೊದಲನೆಯ ಭಾಸ್ಕರನು (ಕ್ರಿ.ಶ. ಏಳನೆಯ ಶತಮಾನ) ಇನ್ನೊಂದು ರೀತಿಯ ಪದಸಂಖ್ಯೆಗಳನ್ನು ಅಳವಡಿಸಿದ್ದು, ಅದು ಪ್ರಾಚೀನ ಭಾರತದಲ್ಲಿ ಪ್ರಚಲವಾಗಿದ್ದಿತು. ಅದನ್ನು ಪಟ್ಟಿ ಎರಡರಲ್ಲಿ ಆಕರ IIರಲ್ಲಿ ಕೊಡಲಾಗಿದೆ.[17]

* * * *

೩. ಭಾರತೀಯ ಲಿಪಿಗಳ ಇತಿಹಾಸ

ಇದುವರೆಗೆ ನಾವು ಸಂಕ್ಷೇಪವಾಗಿ ಸಂಸ್ಕೃತ ಭಾಷೆ ಮತ್ತು ಸಂಸ್ಕೃತದ ವಿಜ್ಞಾನವನ್ನು ಕುರಿತು ಅಧ್ಯಯನ ಮಾಡಿ ಅವುಗಳ ಗುಣ ಹಾಗೂ ಉಪಯೋಗಗಳನ್ನು ಗಮನಿಸಿದ್ದೇವೆ. ಈಗ ನಾವು ಸ್ವಲ್ಪ ಭಿನ್ನವಾದ ಆದರೆ ಅದಕ್ಕೆ ಸಂಬಂಧಪಟ್ಟ ಭಾರತೀಯ ಲಿಪಿಗಳು ಹಾಗೂ ಅವುಗಳ ವಿಕಾಸವನ್ನು ವೈಜ್ಞಾನಿಕ ರೀತಿಯಲ್ಲಿ ಗಮನಿಸಬಹುದು. ದೇವನಾಗರೀ ಲಿಪಿ ಹಾಗೂ ಸಂಸ್ಕೃತ ಒಂದಕ್ಕೊಂದು ಪೂರ್ಣವಾಗಿ ಹೊಂದಿಕೊಳ್ಳುತ್ತವೆ ಮತ್ತು ಅವೆರಡೂ ಒಂದೇ ಎಂದು ಭಾವಿಸಲಾಗಿದೆ. ಆದರೆ ಅದು ಸತ್ಯವಲ್ಲ. ಇತರ ಭಾರತೀಯ ಲಿಪಿಗಳನ್ನು ಮತ್ತು ಅವುಗಳ ಇತಿಹಾಸವನ್ನು ಗಮನಿಸಿದರೆ, ದೇವನಾಗರೀ ಲಿಪಿಯು ತುಲನಾತ್ಮಕವಾಗಿ ಇತ್ತೀಚಿನದೆಂದು ತಿಳಿದುಬರುತ್ತದೆ.

ಆರಂಭದಲ್ಲಿ ಭಾರತದಲ್ಲಿ ಬ್ರಾಹ್ಮೀ ಲಿಪಿಯು ಮಾತ್ರ ಇದ್ದಿತು. ಕಾಲಕ್ರಮದಲ್ಲಿ ಇದರಿಂದ ಭಾರತದ ಎಲ್ಲ ಲಿಪಿಗಳೂ, ದೇವನಾಗರೀ ಸೇರಿದಂತೆ, ವಿಕಾಸಗೊಂಡವು. ಮೂರು ಮತ್ತು ನಾಲ್ಕನೆಯ ಪಟ್ಟಿಗಳು ತೆಲುಗು, ಕನ್ನಡ ಮತ್ತು ಬ್ರಾಹ್ಮೀ ಲಿಪಿಗಳು, ಅಂಕುಡೊಂಕುಗಳನ್ನು ಹೊರತುಪಡಿಸಿದರೆ ಒಂದೇ ರೀತಿಯದಾಗಿದ್ದವು. ಈ ಅಂಕುಡೊಂಕು ಸಾಮಗ್ರಿಗಳಿಂದ ಉಂಟಾಯಿತು. ತಮಿಳಿನ ಬಹುತೇಕ ಅಕ್ಷರಗಳು (ಪಟ್ಟಿ ೫) ಇದೇ ರೀತಿಯ ಉಗಮವನ್ನು ಹೊಂದಿರುವಂತೆ ತೋರುತ್ತದೆ.

ಪಟ್ಟಿ ೬, 'ಕ' ಎಂಬ ಅಕ್ಷರದ ವಿಕಾಸವನ್ನು ತೋರಿಸುತ್ತದೆ. ಕ್ರಿ.ಪೂ. ಎರಡನೆಯ ಶತಮಾನವ ಮೌರ್ಯ ಲಿಪಿಯಲ್ಲಿ ಅದು ಶಿಲುಬೆಯಂತೆ ಕಾಣುತ್ತದೆ. ನಂತರದ ಎರಡನೆಯ ಸಾಲಿನಲ್ಲಿ ಅದೇ ಶಿಲುಬೆಯಾಕಾರ ಸ್ವಲ್ಪ ಅಂಕುಡೊಂಕಿನೊಂದಿಗೆ ಮುಂದುವರಿಯುತ್ತದೆ. 'ಕ' ಎಂಬ ಅಕ್ಷರವನ್ನು ನಾವು ಬರೆಯುವಾಗ ಬೆರಳುಗಳನ್ನು ಮೇಲೆತ್ತದೇ ಹೋದರೆ ಅದು ಗುಂಡಗಾಗಿ ಅದು ಕೊನೆಗೆ ದೇವನಾಗರೀ ಲಿಪಿಯ 'ಕ' ಎನ್ನುವ ಅಕ್ಷರವಾಗುತ್ತದೆ. ಕನ್ನಡವು ಆರಂಭವಾಗುವ ಚಾಲುಕ್ಯ ಕಾಲದಲ್ಲಿ ಗುಂಡಗಿನ 'ಕ' ವಿಕಸನಗೊಳ್ಳುತ್ತದೆ ಎಂಬುದನ್ನು ಗಮನಿಸಬೇಕು. ಇನ್ನೂ ಕೆಳಕ್ಕೆ ಹೋದರೆ, ರಾಷ್ಟ್ರಕೂಟರ ಕಾಲದ ಆರಂಭದ

ಸಮಯದಲ್ಲಿ, ಈಗಿನ ದೇವನಾಗರೀ 'ಕ' ಗಿಂತ ಭಿನ್ನವಾಗಿ ಕಾಣಬರುವುದಿಲ್ಲ. ತಮಿಳಿನಲ್ಲಿ ಆರಂಭದ ದೆಸೆಯಲ್ಲಿ ಇನ್ನೊಂದು ಪಕ್ಕದಲ್ಲಿ ಡೊಂಕು ಇದೆ. ಆದರೆ ಚೋಳರ ಕಾಲದ 'ಕ' ಎಂಬ ಅಕ್ಷರವು ದೇವನಾಗರಿಗೆ ಸಮೀಪವಾಗಿದೆ. 'ಕ' ಎಂಬ ಅಕ್ಷರದ ವಿವಿಧ ರೂಪಗಳು, ಅವುಗಳನ್ನು ಯಾವ ರೀತಿ ವಿನ್ಯಾಸಗೊಳಿಸಲಾಯಿತು ಎನ್ನುವುದರ ಮೇಲೆ ನಿರ್ಧರಿತವಾಗುತ್ತದೆ. ಆದುದರಿಂದ ಲಿಪಿಗಳು ಒಂದೇ ರೀತಿಯಲ್ಲಿ ಕಾಣುತ್ತವೆ. ಪಟ್ಟಿ ೭ 'ಗ' ಎಂಬ ಅಕ್ಷರದ ವಿಕಾಸವನ್ನು ತೋರಿಸುತ್ತದೆ. ಆರಂಭದಲ್ಲಿ ಅದು ಇಂಗ್ಲಿಷಿನ 'ವಿ' ಎಂಬ ಅಕ್ಷರದ ತಲೆಕೆಳಗಾದ ರೂಪವನ್ನು ತೋರಿಸುತ್ತದೆ. ಕಾಲಕ್ರಮದಲ್ಲಿ ದೇವನಾಗರೀ 'ಗ' ಎಡಕ್ಕೆ ತಿರುಗುತ್ತದೆ ಮತ್ತು ಕನ್ನಡದ 'ಗ' ಮೇಲಿನ ಒಂದು ಗೆರೆಯನ್ನು ಕೂಡಿಕೊಂಡು, ಇತರ ಲಿಪಿಗಳೊಡನೆ ಸಮಾನತೆಯನ್ನು ಹೊಂದುತ್ತದೆ.

ಪಟ್ಟಿ ೮ರಲ್ಲಿ 'ಟ' ಎನ್ನುವ ಅಕ್ಷರದ ವಿಕಾಸವನ್ನು ತೋರಿಸಲಾಗಿದೆ. ಆರಂಭದ ದೆಸೆಯಲ್ಲಿ ಇಂಗ್ಲಿಷಿನ 'ಸಿ' ಎನ್ನುವ ಅಕ್ಷರದಂತೆ ಇರುತ್ತದೆ. ಅದು ಅದೇ ರೂಪದಲ್ಲಿ ಮುಂದುವರಿದು, ಮೇಲ್ಭಾಗದಲ್ಲಿ ಒಂದು ಗೆರೆಯು ಸೇರಿಕೊಳ್ಳುತ್ತದೆ. ತೆಲುಗು–ಕನ್ನಡ ಲಿಪಿಗಳಲ್ಲಿ ಅದು ಸಂಕೀರ್ಣವಾಗಿ ಮಧ್ಯದಲ್ಲಿ ಅಂಕುಡೊಂಕುಗಳನ್ನು ಒಳಗೊಳ್ಳುತ್ತದೆ. ಕನ್ನಡದಲ್ಲಿ 'ಟ' ಎನ್ನುವ ಅಕ್ಷರವು ಗುಂಡಗಿದ್ದರೂ, ಈ ಎರಡು ಲಿಪಿಗಳಿಗೂ ಆಲಂಕಾರಿಕ ಗೆರೆಯನ್ನು ಬಿಟ್ಟರೆ ಹೋಲಿಕೆಗಳು ಕಾಣಬರುತ್ತವೆ.

೯ನೆಯ ಪಟ್ಟಿಯು 'ಮ' ಎಂಬ ಅಕ್ಷರದ ವಿಕಾಸವನ್ನು ತೋರಿಸುತ್ತದೆ. ಆರಂಭದ ಸಮಯದಲ್ಲಿ ಅದು ಇಂಗ್ಲಿಷಿನ 'ಯು' ಎನ್ನುವ ಅಕ್ಷರಕ್ಕೆ ಕೆಳಗೊಂದು ಬಿಂದು ಇದ್ದಂತೆ ಕಾಣುತ್ತಿತ್ತು. ಕಾಲಕ್ರಮದಲ್ಲಿ ಬದಲಾವಣೆಗಳನ್ನು ಹೊಂದಿ ಇಂದಿನ 'ಮ' ಎಂಬ ಅಕ್ಷರದಂತೆ ಕಾಣಲು ಆರಂಭಿಸಿತು. ಅದು ಪ್ರತಿ ಶತಮಾನದಲ್ಲಿ 'ಯೂ' ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಕೊನೆಗೆ ತೀರ ಭಿನ್ನವಾಗಿ ಕಾಣಲು ಆರಂಭಿಸಿತು. ಆಲಂಕಾರಿಕ ಗೆರೆಗಳನ್ನು ಹೊರತುಪಡಿಸಿದರೆ, ಕನ್ನಡದ 'ಮ', ನೇರವಾಗಿ ಅದೇ ಮೂಲದಿಂದ ಬಂದಿದ್ದಾಗಿದೆ. ಇದೇ ಪಟ್ಟಿಯ ಮೇಲ್ಭಾಗದಲ್ಲಿ, ತಮಿಳು ಲಿಪಿಯಲ್ಲಿ, 'ಮ' ಮೌರ್ಯ ಲಿಪಿಯಂತೆ ಕಾಣಬರುತ್ತದೆ; ಬಹುಶಃ ಅವುಗಳಿಗೆ ಸಂಬಂಧವಿದ್ದಿರಬಹುದಾದ ಸಾಧ್ಯತೆಯಿದೆ. ಆದರೆ ಅದು ದಕ್ಷಿಣದಿಂದ ಉತ್ತರಕ್ಕೆ ಹೋಯಿತೇ ಅಥವಾ ಉತ್ತರದಿಂದ ದಕ್ಷಿಣಕ್ಕೆ ಬಂದಿತೇ ಎಂಬುದನ್ನು ಹೇಳುವುದು ಕಷ್ಟಕರವಾದ ಸಂಗತಿ.

೧೦ನೆಯ ಪಟ್ಟಿಯು ದೇವನಾಗರೀ 'ಯ' ಎಂಬ ಅಕ್ಷರದ ವಿಕಾಸವನ್ನು ತೋರಿಸುತ್ತದೆ. ಆರಂಭದ ಮೌರ್ಯರ ಕಾಲದಲ್ಲಿ ತಲೆ ಕೆಳಗಾದ ಬಾಣದಂತೆ

ಕಾಣಬರುತ್ತದೆ. ವಿಜಯನಗರದ ಕನ್ನಡ ಲಿಪಿಯಲ್ಲಿ ಈ ಅಕ್ಷರ ಸಂಕೀರ್ಣವಾದಂತೆ ತೋರುತ್ತದೆ. ತಮಿಳಿನ 'ಯ' ಆಸಕ್ತಿಕರವಾಗಿದ್ದು, ತಲೆಕೆಳಗಾದ ಬಾಣದಂತೆ ಇದ್ದು ಅದರ ರೆಕ್ಕೆಗಳು ಮೇಲಕ್ಕೆ ಪ್ರಸರಿಸಿವೆ. ದಕ್ಷಿಣ ಭಾರತದಲ್ಲಿ ಇದನ್ನು ಮೂರು ನಾಮ ಎಂದು ಕರೆಯಲಾಗುತ್ತದೆ. ಅದರ ವಿಕಾಸವನ್ನು ಈ ಪಟ್ಟಿಯಲ್ಲಿ ನೋಡಬಹುದು. ಮುಂದಿನ ಎರಡು ಪಟ್ಟಿಗಳು 'ಲ' ಮತ್ತು 'ವ' ಎಂಬ ಅಕ್ಷರಗಳಿಗೆ ಸಂಬಂಧಿಸಿದ್ದಾಗಿವೆ. ವಿಕಾಸವನ್ನು ಓದುಗರೇ ತಿಳಿದುಕೊಳ್ಳಲು ಬಿಡಲಾಗಿದೆ.

* * * *

೪. ಲಿಪಿಯ ಸುಧಾರಣೆ ಮತ್ತು ಹೊಸ ಲಿಪಿಯ ಆವಿಷ್ಕಾರ

ಭಾರತದ ಎಲ್ಲ ಲಿಪಿಗಳೂ ಹೆಚ್ಚು ಕಡಿಮೆ ಒಂದು ಸಮಾನ ಲಿಪಿಯಿಂದ ವಿಕಾಸಗೊಂಡವು ಎಂಬುದನ್ನು ಆಗಲೇ ಗಮನಿಸಿದ್ದೇವೆ. ಅಷ್ಟೇ ಅಲ್ಲದೆ, ಎಲ್ಲ ಲಿಪಿಗಳೂ ವೈಜ್ಞಾನಿಕ ರೀತಿಯಲ್ಲಿ ಶತಮಾನಗಳ ಅವಧಿಯಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ವಿಕಾಸ ಹೊಂದಿವೆ ಎಂಬುದೂ ತಿಳಿದು ಬಂದಿದೆ. ಉದಾಹರಣೆಗೆ 'ಡ' ಮತ್ತು 'ಜ' ಎಂಬ ಅಕ್ಷರಗಳು ಒಂದು ಬಿಂದುವನ್ನು ಬಿಟ್ಟರೆ ನೋಡಲು ಒಂದೇ ರೀತಿಯಲ್ಲಿ ಕಾಣಬರುತ್ತವೆ. ಆದರೆ ಅವುಗಳಿಗೆ ಯಾವ ಸಂಬಂಧವೂ ಇಲ್ಲ. ಈಗ ನಮ್ಮ ಸಮಾಜದಲ್ಲಿ ಕಂಪ್ಯೂಟರ್‌ಗಳು ಮಹತ್ತರ ಪಾತ್ರವನ್ನು ವಹಿಸುತ್ತಲಿದ್ದು, ನಮ್ಮ ಸಮಾಜದ ಅಂಗವೇ ಆಗಿ ಮುಂದುವರಿಯುತ್ತವೆ. ಇವೆಲ್ಲವನ್ನೂ ಗಮನಿಸಿದಾಗ ಲಿಪಿ ಸುಧಾರಣೆಗೆ ಇದು ಸರಿಯಾದ ಸಮಯವೆನಿಸುತ್ತದೆ. ಲಿಪಿ ಸುಧಾರಣೆಯು ನಿಜವಾಗಿ ಆಚರಣೆಗೆ ಬರುತ್ತದೆಯೇ ಎಂಬುದು ಸಂದೇಹಾಸ್ಪದವಾದರೂ, ಇಲ್ಲಿ ಇದನ್ನು ಆಚರಣೆಗೆ ತರಲು ಪ್ರಯತ್ನಗಳನ್ನು ಮಾಡಲು ಉದ್ದೇಶಿಸಿದೆ. ಏಕೆಂದರೆ ಇದು ಭಾರತೀಯ ಭಾಷೆಗಳನ್ನು ಸರಳಗೊಳಿಸಿ ಹಳ್ಳಿಗರೂ ಕೂಡ, ಲಿಪಿಗಳನ್ನು ಶೀಘ್ರವಾಗಿ ಕಲಿಯಲು ಅವಕಾಶವಾಗುತ್ತದೆ.

೧೩ನೇ ಪಟ್ಟಿಯಲ್ಲಿ (ಕೊನೆಯ ಸಾಲು) ನಾವು ಸೂಚಿಸಲು ಉದ್ದೇಶಿಸಿರುವ ಸ್ವರಗಳ ಸರಳೀಕರಣದ ರೂಪವನ್ನು ಕೊಟಿದ್ದೇವೆ. ಅವು ದೇವನಾಗರೀ ಲಿಪಿಯಿಂದ ಎರಡು ಮೂರು ಹಂತಗಳಲ್ಲಿ ವಿಕಸನಗೊಂಡ ರೂಪಗಳನ್ನು ತೋರಿಸುತ್ತವೆ. ಎರಡನೆಯ ಸಾಲಿನಲ್ಲಿ ಎಲ್ಲ ಸ್ವರಗಳೂ 'ಅ' ಎಂಬ ಅಕ್ಷರದಿಂದ ಸಣ್ಣ ಬದಲಾವಣೆಗಳೊಂದಿಗೆ ಆಗಬಲ್ಲವು ಎಂಬುದನ್ನು ವಿವರಿಸಲಾಗಿದೆ. 'ಅ' ಅಕ್ಷರದ ಮೇಲೆ ಒಂದು ಗೆರೆಯನ್ನು ಹಾಕುವುದರಿಂದ 'ಆ' ಉಂಟಾಗುತದೆ; 'ಇ' ಎಂಬ ಅಕ್ಷರ '೧' ಎಂಬ ಚಿಹ್ನೆಯಿಂದ 'ಈ' ಆಗುತ್ತದೆ; 'ಈ' ನಂತರ m ಬರುತ್ತದೆ; ಉ ಮತ್ತು ಊ ನಂತರ ಕ್ರಮವಾಗಿ u ಮತ್ತು w ಬರುತ್ತವೆ. ಮಿಕ್ಕ ಅಕ್ಷರಗಳ ವಿಕಸನ ತಾನೇ ತಾನಾಗಿ ತಿಳಿದುಬರುತ್ತದೆ. ಮೂರನೆಯ ಸಾಲಿನಲ್ಲಿ ಸ್ವರಗಳು ಪೂರ್ಣವಾಗಿ ಪ್ರತ್ಯೇಕಿಸಲ್ಪಟ್ಟಿವೆ ಮತ್ತು ಸರಳೀಕರಣದೊಡನೆ ಕೊನೆಯ ಸಾಲಿನಲ್ಲಿ ಅವುಗಳು

ಕಾಣಿಸಲ್ಪಟ್ಟಿವೆ. ಇವುಗಳನ್ನು ಒಟ್ಟಿಗೆ ಸೇರಿಸುವುದರಿಂದ I, H, ∩, m, U, W ಇತ್ಯಾದಿಗಳಾಗುತ್ತವೆ. ಇದರಲ್ಲಿ ತಮಿಳಿನ ಕೆಲವು ಅಂಶಗಳನ್ನು ಗಮನಿಸಬಹುದು. ಈ ಸರಳೀಕೃತ ಲಿಪಿಯನ್ನು ಬಳಸುವುದರಿಂದ, ಈ ಚಿಹ್ನೆಗಳನ್ನು ವ್ಯಂಜನಗಳೊಡನೆ ಬಳಸಿದರೆ, ಸ್ವರಗಳ ಪರಿಣಾಮ ಉಂಟಾಗುತ್ತವೆ.

೧೪ನೆಯ ಪಟ್ಟಿಯಲ್ಲಿ ವ್ಯಂಜನಗಳು ಮತ್ತು ಸ್ವರಗಳ ಅಂತ್ಯವನ್ನು ಹೊಸ ಲಿಪಿಯಲ್ಲಿ ಹಾಗೂ ದೇವನಾಗರೀ ಲಿಪಿಯಲ್ಲಿ ತೋರಿಸಲಾಗಿದೆ. ಇದರಲ್ಲಿ ಸಾಮಾನ್ಯವಾದ 'ಕ' ಇದೆ; ಇದಕ್ಕೆ ಒಂದು ಡೊಂಕನ್ನು ಸೇರಿಸುವುದರಿಂದ 'ಖ' ಆಗುತ್ತದೆ. ಇದೇ ಮಾರ್ಗವನ್ನು 'ಕ್' ಇಂದ 'ಮ್' ವರೆಗೆ ಇತರ ಎಲ್ಲ ವರ್ಗಗಳಿಗೂ ಅನ್ವಯಿಸಬಹುದು. ಇದು ಅನೇಕ ಅಕ್ಷರಗಳನ್ನು ಕಡಿಮೆ ಮಾಡುತ್ತದೆ ಮತ್ತು ತಮಿಳು ಲಿಪಿಯಲ್ಲಿರುವಂತೆ ಕ, ಖ ಮತ್ತು ಗ ಒಂದೇ ಸಮನಾಗಿರುತ್ತವೆ. ಅಪರೂಪವಾಗಿ ಬಳಸಲಾಗುವ ಜ ಮತ್ತು ಞ ಅಕ್ಷರಗಳು 'ಙ' ರೀತಿಯಲ್ಲೇ ಇದ್ದು, ಕ್ರಮವಾಗಿ ಎರಡು ಮತ್ತು ಒಂದು ಬಿಂದುಗಳು ಕಡಿಮೆಯಾಗಿರುತ್ತವೆ. ಈ ರೀತಿ ಬರೆದಾಗ ಕ, ಚ, ಟ, ತ, ಪ, ಇವೆಲ್ಲವೂ ಹೊಸ ಅಕ್ಷರಗಳಂತೆ ಕಾಣಬರುತ್ತವೆ. ಮಿಕ್ಕ ಅಕ್ಷರಗಳೆಲ್ಲವೂ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಕಾಣಿಸಿಕೊಳ್ಳುತ್ತವೆ. ಏಕೆಂದರೆ ಅವೆಲ್ಲವೂ ಧ್ವನಿವಿಜ್ಞಾನದ ಪ್ರಕಾರ ಒಂದೇ ರೀತಿಯದ್ದಾಗಿವೆ. ತಮಿಳಿನಲ್ಲಿ ಅದ್ಭುತನಾಥನ್ ಮತ್ತು ಅತ್‌ಬುತನಾತನ್ ಎರಡೂ ಒಂದೇ ಆಗಿವೆ. ಏಕೆಂದರೆ ಅವೆರಡೂ ಒಂದೇ ಧ್ವನಿ ರೂಪದಲ್ಲಿರುವುದರಿಂದ, ಯಾವ ಭಿನ್ನತೆಯೂ ಕಾಣಬರುವುದಿಲ್ಲ. ಕೊನೆಯದಾಗಿ ಯ, ರ, ಲ, ವ, ಶ, ಷ, ಸ, ಹ ಎಂಬ ಅಕ್ಷರಗಳಲ್ಲಿ ಇಡೀ ವರ್ಣಮಾಲೆಯನ್ನು ಸರಳೀಕರಣಗೊಳಿಸಲು ಸೂಕ್ತ ಬದಲಾವಣೆ ಮಾಡಲಾಗಿದೆ.

೧೫ನೆಯ ಪಟ್ಟಿಯಲ್ಲಿ ಒಂದು ಶ್ಲೋಕದ ಅರ್ಧ ಭಾಗವನ್ನು ಮೂಲ ರೂಪದಲ್ಲಿ ಮತ್ತು ಹೊಸ ಲಿಪಿಯಲ್ಲಿ ಹಾಗೂ ಕಂಪ್ಯೂಟರ್‌ಗೋಸ್ಕರ ಲಂಬ ರೇಖೆಗಳನ್ನು ಅಳವಡಿಸಿರುವ ರೂಪದಲ್ಲಿ ಕೊಡಲಾಗಿದೆ. ಈ ಶ್ಲೋಕವನ್ನು ನಾವು ಆದಿ ಶಂಕರಾಚಾರ್ಯರ 'ಭಜಗೋವಿಂದಂ'[18] ಎಂಬ ಸ್ತೋತ್ರದಿಂದ ತೆಗೆದುಕೊಂಡಿದ್ದೇವೆ. ಪ್ರಸ್ತುತ ಈ ಲೇಖನಕ್ಕೆ ಇದು ಔಚಿತ್ಯಪೂರ್ಣವೆನಿಸುತ್ತದೆ. ಏಕೆಂದರೆ ನಾವು ಪಾಣಿನಿ ಮತ್ತು ವ್ಯಾಕರಣದಿಂದ ನಮ್ಮ ವಿವೇಚನೆಯನ್ನು ಆರಂಭಿಸಿದೆವು; ಈ ಶ್ಲೋಕ ವ್ಯಾಕರಣದ ನಿಯಮಗಳನ್ನು ಉಲ್ಲೇಖಿಸುತ್ತದೆ. ಇದರ ಅರ್ಥ ಹೀಗಿದೆ: "ಮರಣದ ಸಮಯದಲ್ಲಿ ವ್ಯಾಕರಣದ ನಿಯಮಗಳು ಉಪಯೋಗಕ್ಕೆ ಬರುವುದಿಲ್ಲ." ಶಂಕರಾಚಾರ್ಯರು ಯಾವ ಅರ್ಥದಲ್ಲಿ ಇದನ್ನು ಹೇಳಿದರೋ, ನಾವು ಇದನ್ನು ಹೀಗೆ ವಿವರಿಸಬಹುದು: ವ್ಯಾಕರಣದ ನಿಯಮಗಳನ್ನು

ನಾವು ಕೊನೆಯಲ್ಲಿ ಗಮನಿಸಿದರೆ ಅವು ಉಪಯೋಗಕ್ಕೆ ಬರುವುದಿಲ್ಲ. ಈ ಪಟ್ಟಿಯ ಮಧ್ಯದಲ್ಲಿ ಕೊಟ್ಟಿರುವುದು ಈ ಶ್ಲೋಕಾರ್ಧವು ಹೊಸ ಲಿಪಿಯಲ್ಲಿ ಹೇಗೆ ಕಾಣಿಸುತ್ತದೆ ಎಂಬುದನ್ನು ತೋರಿಸುತ್ತದೆ. ನಾವು ಮಂಡಿಸಿರುವ ಲಿಪಿ ಆದರ್ಶಪ್ರಾಯವಾದುದೇನೂ ಅಲ್ಲ. ಕೆಳಗಡೆ ತೋರಿಸಿರುವುದು ಸರಳ ರೇಖೆಯ ರೂಪದಲ್ಲಿರುವ ಕಂಪ್ಯೂಟರ್ ಚಿತ್ರಣ. ಇದು ಮೇಲ್ನೋಟಕ್ಕೆ ಭಿನ್ನವಾಗಿ ಕಂಡರೂ, ಆಗಲೇ ಗಮನಿಸಿರುವ ಅನುಕೂಲಗಳನ್ನು ಅಳವಡಿಸಿಕೊಂಡಿರುವ ದೇವನಾಗರೀ ಲಿಪಿಯ ವಿಕಸಿತ ರೂಪವೇ ಅದು ಎನ್ನುವುದನ್ನು ಮರೆಯುವಂತಿಲ್ಲ.

* * * *

೫. ಸಾರಾಂಶ ಮತ್ತು ಉಪಸಂಹಾರ

ಪಾಣಿನಿಯಿಂದ ಆರಂಭಿಸಿ ಇಂದಿನ ಲಿಪಿಗಳವರೆಗೆ ದೀರ್ಘ ಸಮಯದವರೆಗಿನ ವಿವೇಚನೆಯನ್ನು ಮಾಡಿದ್ದೇವೆ ಮತ್ತು ಲಿಪಿಯ ಸುಧಾರಣೆಯನ್ನೂ ಗಮನಿಸಿದ್ದೇವೆ. ನಾವು ಒಂದು ಹೊಸ ಲಿಪಿಯನ್ನೂ ಮಂಡಿಸಿದ್ದೇವೆ; ಇದರಲ್ಲಿ ದೇವನಾಗರೀ ಲಿಪಿಯ ಐವತ್ತು ಅಕ್ಷರಗಳನ್ನು ಇಪ್ಪತ್ತಾರಕ್ಕೆ ಇಳಿಸಿದ್ದೇವೆ. ಸರಳವಾಗಿರುವ ಕೈಬರಹಕ್ಕೆ ಇದು ಸಮರ್ಪಕವಾಗಿದೆ ಮತ್ತು ಎಲ್ಲ ಭಾರತೀಯ ಭಾಷೆಗಳಿಗೂ ಅಳವಡಿಸಲು ಅರ್ಹವಾಗಿದೆ. ಆದುದರಿಂದ ಇವುಗಳ ಏಕತೆಯನ್ನು ಸಾಧಿಸಲು ಹಾದಿಯನ್ನು ಸುಗಮವಾಗಿ ಮಾಡಿದೆ. ಆದರೆ ನಾವು ಇದೇ ಲಿಪಿಯನ್ನು ಬಳಸಬೇಕೆಂದು ಒತ್ತಾಯಿಸುವುದಿಲ್ಲ. ಈ ರೀತಿಯ ಒಂದು ಸಾಧ್ಯತೆ ಇದೆ ಎಂಬುದನ್ನು ತೋರಿಸುವುದೇ ನಮ್ಮ ಮುಖ್ಯ ಉದ್ದೇಶ. ವಿದ್ವಾಂಸರು ಇದರ ಬಗೆಗೆ ಗಮನಹರಿಸಬೇಕು.

ವೈಜ್ಞಾನಿಕ ಪದಗಳನ್ನು ತಿಳಿಸುವಾಗ ಸೂತ್ರ ರೂಪದ ಮಾರ್ಗವು ಸೂಕ್ತವಾದುದು. ಅದರಲ್ಲಿಯೂ ಗಣಿತಶಾಸ್ತ್ರವನ್ನು ವಿವೇಚಿಸುವಾಗ ಇದು ಹೆಚ್ಚು ಸೂಕ್ತ. ಏಕೆಂದರೆ ಇದು ಸರಳವಾಗಿ ಮತ್ತು ಅಡಕವಾಗಿಯೂ ಇದ್ದು ಈಗ ಬಳಕೆಯಲ್ಲಿರುವ ಸಂಕೇತ ಪದ್ಧತಿಗಿಂತ ಹೆಚ್ಚು ನಿಖರವಾಗಿ ತೋರುತ್ತದೆ.

ಈ ಲೇಖನವನ್ನು ಒಂದು ಶ್ಲೋಕವನ್ನು ಉದ್ಧರಿಸಿ ಉಪಸಂಹಾರ ಮಾಡುತ್ತೇವೆ.[19]

ಸರ್ವಥಾ ವ್ಯವಹರ್ತವ್ಯಂ ಕುತೋ ಹ್ಯವಚನೀಯತಾ।
ಯಥಾ ಸ್ತ್ರೀಣಾಂ ತಥಾ ವಾಚಾಂ ಸಾಧುತ್ವೇ ದುರ್ಜನೋ ಜನಃ ॥

'ಖಂಡಿತವಾಗಿ ಮಾತನಾಡಲೇ ಬೇಕು. ಏಕೆಂದರೆ ವಿಮರ್ಶಕರನ್ನು ಸಂತೈಸುವುದು ಸಾಧ್ಯವಿಲ್ಲದ ಮಾತು. ಒಬ್ಬರ ಮಾತುಗಳನ್ನಾಗಲೀ (ಅಥವಾ ಸಾಹಿತ್ಯ ಕೃತಿಯನ್ನಾಗಲೀ) ಅಥವಾ ಒಬ್ಬಳು ಸ್ತ್ರೀಯ ಪಾವಿತ್ರ್ಯವನ್ನು ನಿರ್ಧರಿಸುವಲ್ಲಿ ಜನಗಳು ಯಾವಾಗಲೂ ನಿಷ್ಠುರರಾಗಿರುತ್ತಾರೆ.'

ಆಕರ ಉಲ್ಲೇಖಗಳು

೧. ದಿ. ವಸು, ಶ್ರೀಶಚಂದ್ರ, (ಸಂ) ೧೯೭೭; ದಿ. 'ಅಷ್ಟಾಧ್ಯಾಯಿ ಆಫ್ ಪಾಣಿನಿ' (ಭಾಗ ೧ ಮತ್ತು ೨) ಮೋತಿಲಾಲ್ ಬನಾರಸೀದಾಸ್, ದೆಹಲಿ.

೨. ಬಾರ್–ಹಿಲೇಲ್, ಯಹೋಶುಅ (೧೯೬೪); 'ಲಾಂಗ್ವೇಜ್ ಅಂಡ್ ಇನ್‌ಫರ್‌ಮೇಷನ್', ಅಡಿಸನ್–ವೆಸ್ಲಿ ಪಬ್ಲಿಷಿಂಗ್ ಕಂಪೆನಿ, ಐಎನ್‌ಸಿ, ಮ್ಯಾಸಾಚುಸೆಟ್ಸ್ ಅಂಡ್ ದಿ ಜೆರೂಸಲೇಂ ಅಕಾಡೆಮಿಕ್ ಪ್ರೆಸ್, ಲಿ., ಜೆರೂಸಲೇಂ.

೩. ಪುಸಾಳ್ಕರ್, ಎ.ಡಿ. (೧೯೬೩); 'ಸ್ಟಡೀಸ್ ಇನ್ ದಿ ಎಪಿಕ್ಸ್ ಅಂಡ್ ದಿ ಪುರಾಣಾಸ್', ಭಾರತೀಯ ವಿದ್ಯಾಭವನ, ಬಾಂಬೆ, ಪು. ೪.

೪. ನೆಹರು, ಜವಾಹರ್‌ಲಾಲ್ (೧೯೬೧); 'ದಿ ಡಿಸ್ಕವರಿ ಆಫ್ ಇಂಡಿಯ', ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, ಪು. ೧೬೫.

೫. ವಿದ್ಯಾಭೂಷಣ, ಮಹಾಮಹೋಪಾಧ್ಯಾಯ ಸತೀಶ್‌ಚಂದ್ರ (೧೯೭೧); 'ಎ ಹಿಸ್ಟರಿ ಆಫ್ ಇಂಡಿಯನ್ ಲಾಜಿಕ್', ಮೋತಿಲಾಲ್ ಬನಾರಸೀದಾಸ್, ವಾರಣಾಸಿ.

೬ ಶಾಸ್ತ್ರಿ ಎಸ್. ಕುಪ್ಪುಸ್ವಾಮಿ (೧೯೫೧); 'ಎ ಪ್ರೈಮರ್ ಆಫ್ ಇಂಡಿಯನ್ ಲಾಜಿಕ್ ಅಕಾರ್ಡಿಂಗ್ ಟು ಅನ್ನಂಭಟ್ಟಾಸ್ ತರ್ಕಸಂಗ್ರಹ', ದಿ ಕುಪ್ಪುಸ್ವಾಮಿ ಶಾಸ್ತ್ರಿ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಲಾಪುರ್, ಮದ್ರಾಸು.

೭. ರಾಮಣ್ಣ ಆರ್. (೧೯೭೬); 'ದಿಲೀಪ್', ಸಂಪುಟ ೩, ನಂಬರ್ ೩, ಮೇ ೧ ಜೂನ್, ಪು. ೩೧.

೮. ಪ್ರಕಾಶ್ ಎಸ್. ಮತ್ತು ಶರ್ಮ ಆರ್.ಎಸ್. (ಸಂ), ೧೯೬೮: 'ಬೌಧಾಯನ ಶುಲ್ಬಸೂತ್ರಂ' (ಸಂಸ್ಕೃತ ಟೀಕೆ, ಡಿ.ಎನ್. ಯಜ್ವನ್, ಇಂಗ್ಲಿಷ್ ಭಾಷಾಂತರ, ತಿಬೌಟ್, ಸಿ. ದಿ ರಿಸರ್ಚ್ ಇನ್ಸ್‌ಟಿಟ್ಯೂಟ್ ಆಫ್ ಏನ್‌ಷಂಟ್ ಸೈಂಟಿಫಿಕ್ ಸ್ಟಡೀಸ್, ನವದೆಹಲಿ, ಅಧ್ಯಾಯ ೧, ೪೮, ಪು. ೫೧.

೯. ಅದೇ, ಅಧ್ಯಾಯ ೧, ೬೧–೬೨; ಇದನ್ನು ನೋಡಿ: 'ಆಪಸ್ತಂಬ ಶುಲ್ಬಸೂತ್ರಂ', ಪಟಲ, A೧ ೧೩–೧೪, ಪು. ೨೨೧.

೧೦. ಖಾಡಿಲ್ಕರ್, ಎಸ್.ಡಿ. (ಸಂ.); ೧೯೭೪, 'ಕಾತ್ಯಾಯನ ಶುಲ್ಬಸೂತ್ರ' (ಇಂಗ್ಲಿಷ್ ಭಾಷಾಂತರ ಮತ್ತು ಟಿಪ್ಪಣಿಗಳು, ವೈದಿಕ ಸಂಶೋಧನ ಮಂಡಲ, ಪುಣೆ, ಅಧ್ಯಾಯ ೨, ೧೩, ಪು.೧೮.

೧೧. ಶರ್ಮ, ಕೆ.ವಿ. (ಸಂ). (೧೯೭೮); 'ಆರ್ಯಭಟೀಯ ಆಫ್ ಆರ್ಯಭಟ', ೧, ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ನವದೆಹಲಿ, ಪು. ೪೬.

೧೨. ಶಂಕರವರ್ಮನ್, 'ಸದ್ರತ್ನಮಾಲಾ', ಅಧ್ಯಾಯ ೪, ೨.

೧೩. ಶರ್ಮ, ಆಚಾರ್ಯವರ, ಆರ್.ಎಸ್. (ಸಂ.) ೧೯೬೬, 'ಶ್ರೀ ಬ್ರಹ್ಮಗುಪ್ತ ವಿರಚಿತ ಬ್ರಾಹ್ಮ–ಸ್ಫುಟ ಸಿದ್ಧಾಂತ', ಸಂಪುಟ ೧, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರೊನಾಮಿಕಲ್ ಅಂಡ್ ಸಂಸ್ಕೃತ್ ರಿಸರ್ಚ್, ನವದೆಹಲಿ, ಕುಟ್ಟಕಾಧ್ಯಾಯ, ೧೮, ೬೪–೬೫, ಪು.೨೫೪–೨೫೫, ಇಂಗ್ಲಿಷ್ ಭಾಷಾಂತರಕ್ಕೆ ನೋಡಿ, ಪು.೨೪೬.

೧೪. ಝಾ, ಮಹಾಮಹೋಪಾಧ್ಯಾಯ ಪಂಡಿತ್ ಶ್ರೀ ಮುರಳೀಧರ (ಸಂ.) (೧೯೨೭); 'ಬೀಜಗಣಿತ ಆಫ್ ಭಾಸ್ಕರಾಚಾರ್ಯ', ಟಿಪ್ಪಣಿಗಳು ಮತ್ತು ಉದಾಹರಣೆಗಳು, ಎಂ.ಎಂ.

ಪಂಡಿತ್ ಶ್ರೀ ಸುಧಾಕರ ದ್ವಿವೇದಿ, ಬನಾರಸ್ ಸಂಸ್ಕೃತ್ ಸೀರೀಸ್, ಬನಾರಸ್, ಚಕ್ರವಾಲಂ ೧–೪, ಪು.೩೬.

೧೫. ಶುಕ್ಲ, ಕೆ.ಎಸ್. ಮತ್ತು ಶರ್ಮ, ಕೆ.ವಿ. (ಸಂ) ೧೯೭೬, 'ಆರ್ಯಭಟೀಯ ಆಫ್ ಆರ್ಯಭಟ', ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ನವದೆಹಲಿ, ಪು. ೬.

೧೬. ನೋಡಿ ಮೇಲೆ ೧೫, ಪು. ೩.

೧೭. ಶುಕ್ಲ ಕೆ.ಎಸ್. (ಸಂ.), ೧೯೭೬; 'ಆರ್ಯಭಟೀಯ ಆಫ್ ಆರ್ಯಭಟ ವಿತ್ ಕಾಮೆಂಟರಿ ಆಫ್ ಭಾಸ್ಕರ ೧ ಅಂಡ್ ಸೋಮೇಶ್ವರ', ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ನವದೆಹಲಿ, ಪು.೩೫೧.

೧೮. ರಾಜಗೋಪಾಲಾಚಾರಿ, ಸಿ (೧೯೭೧); 'ಭಜಗೋವಿಂದಂ, ಶ್ರೀ ಶಂಕರಾಚಾರ್ಯ', ಭಾರತೀಯ ವಿದ್ಯಾಭವನ, ಚೌಪಾಟಿ, ಬಾಂಬೆ, ಶ್ಲೋಕ ೧, ಪು. ೩.

೧೯. ಅಯ್ಯರ್, ಟಿ.ಆರ್. ರತ್ನಂ ಮತ್ತು ಶಾಸ್ತ್ರಿ, ಡಬ್ಲ್ಯು.ಎಲ್ (ಸಂ.), ೧೯೩೦, 'ದಿ ಉತ್ತರ ರಾಮಚರಿತ ಆಫ್ ಭವಭೂತಿ ವಿತ್ ಕಾಮೆಂಟರಿ ಆಫ್ ವೀರರಾಘವ', ಬಾಂಬೆ, ಅಂಕ ೧, ಶ್ಲೋಕ ೫, ಪು. ೧೩.

* * * *

ಪಟ್ಟಿ ೧: ತರ್ಕಸಂಗ್ರಹದ ಮೂರು ಶ್ಲೋಕಗಳು ಮತ್ತು ಅದರ ಅರ್ಥ


ಸಂಸ್ಕೃತ ಶ್ಲೋಕ ೨	ಅನುವಾದ ಅ	ಅನುವಾದ ಆ
ದ್ರವ್ಯ	ಪದಾರ್ಥ	ವಸ್ತು
ಗುಣ	ಗುಣ	ಲಕ್ಷಣ
ಕರ್ಮ	ಕ್ರಿಯೆ	ಡೈನಾಮಿಕ್ಸ್
ಸಾಮಾನ್ಯ	ಸಾಮಾನ್ಯ	ವಸ್ತುಗಳ ಲಕ್ಷಣಗಳೊಡನೆ ಸಂಪರ್ಕ
ವಿಶೇಷ	ನಿರ್ದಿಷ್ಟ	ಇತರ ವಸ್ತುಗಳೊಡನೆ ಸೇರದ ಲಕ್ಷಣಗಳು
ಸಮವಾಯ	ಅಂತರ್ಗತ	ಆಂತರಿಕ ಲಕ್ಷಣ
ಅಭಾವ	ಅಸ್ತಿತ್ವವಿಲ್ಲದಿರುವುದು	ವಸ್ತುವಿಲ್ಲದ ಆಕಾರ
ಶ್ಲೋಕ ೩ ಅ		
ಪೃಥ್ವೀ	ಭೂಮಿ	ಘನ
ಆಪಃ	ನೀರು	ದ್ರವ
ವಾಯು	ಗಾಳಿ	ಆವಿ
ತೇಜಸ್ಸು	ಬೆಳಕು	ವಿಕಿರಣ
ಆಕಾಶ	ಆಕಾಶ	ಆಕಾಶ
ಕಾಲ	ಕಾಲ	ಕಾಲ
ದಿಕ್	ಪ್ರದೇಶ	ಸ್ಥಳ
ಆತ್ಮನ್	ಆತ್ಮ	ಆತ್ಮ
ಮನಸ್	ಮನಸ್ಸು	ಜಾಗೃತ
ಶ್ಲೋಕ ೩ ಸಿ		
ಉತ್ಕ್ಷೇಪಣ ಅವಕ್ಷೇಪಣ	ಮೇಲಿನ ಚಲನೆ ಕೆಳಗಿನ ಚಲನೆ }	ನಿಯಂತ್ರಿತ ಚಲನೆ
ಆಕುಂಚನ	ಸಂಕ್ಷೇಪ	–
ಪ್ರಸಾರಣ	ವಿಸ್ತಾರ	–
ಗಮನಾನಿ	ಸ್ಥಳದಿಂದ ಸ್ಥಳಕ್ಕೆ ಹೋಗುವುದು }	ಗುರಿಯಿಲ್ಲದ ಚಲನೆ

ಪಟ್ಟಿ ೨: ಮೊದಲನೆಯ ಭಾಸ್ಕರನು ಉಪಯೋಗಿಸಿರುವ ಪದ ಸಂಖ್ಯೆಗಳು

ಸಂಖ್ಯೆ	ಪದಗಳು
೦	ಅಗ್ರ, ಅಂಬರ, ಆಕಾಶ, ಖ, ಗಗನ, ನಭ, ಪೂರ್ಣ, ಬಿಂದು, ವಿಯತ್, ವಿಹಾಯಸ್, ವ್ಯೋಮ, ಶೂನ್ಯ.
೧.	ಅಮೃತಸನ್ಮಯೂಖ, ಇಂದು, ಉಡುಪ, ಚಂದ್ರ, ಚಂದ್ರಕ, ಧರಾ, ನಿಶಾಕರ, ನಿಶಾನಾಥ, ಪ್ರಾಲೇಯರಶ್ಮಿ, ರೂಪ, ಶಶಾಂಕ, ಶಶಿ, ಶಾಲಿನ್, ಶೀತಕಿರಣ, ಶೀತರಿಷ್ಮ, ಶೀತಾಂಶು, ಸುಧಾಮಯೂಖ, ಹಿಮಾಂಶು.
೨.	ಅಶ್ವಿನ್, ದಸ್ರ, ನಯನ, ನೇತ್ರ, ಪಕ್ಷ, ಬಾಹು, ಯಮ, ಯಮಲ, ಯುಗಲ
೩.	ಅಗ್ನಿ, ಕೃಶಾನು, ಗುಣ, ದಹನ, ಪಾವಕ, ಪುಷ್ಕರ, ರಾಮ, ಲೋಕ, ವಹ್ನಿ, ವಿಕ್ರಮ, ವಿಷ್ಣುಕ್ರಮ, ಶಿಖಿ, ಹುತಾಶನ.
೪.	ಅಬ್ಧಿ, ಅಂಬುನಿವಹ, ಅಂಬೋಧಿ, ಆಪಗಾನಾಥ, ಉದಧಿ, ಕೃತ, ಜಲಧರ, ಜಲಧಿ, ಪಯೋಧರ, ವೇದ, ಸಮುದ್ರ, ಸಾಗರ.
೫.	ಅಕ್ಷ, ಅರ್ಥ, ಇಂದ್ರಿಯ, ಇಷು, ತನ್ಮಾತ್ರ, ಬಾಣ, ಭತ, ವಿಷಯ, ಶರ, ಶಿಲೋಮುಖ, ಸಾಯಕ.
೬.	ಅಂಗ, ಋತು, ರಸ.
೭.	ಅಗ, ಅಚಲ, ಅದ್ರಿ, ಋಷಿ, ಕ್ಷಿತಿಧರ, ಕ್ಷಿತಿಭೃತ, ಕ್ಷೋಣೀಧರ, ಕ್ಷ್ಮಾಭೂತ್, ಗಿರಿ, ತಾಪಸ, ದಿವಿಚರ, ಧಾತ್ರೀಧರ, ನಗ, ಪರ್ವತ, ಭೂಧರ, ಭೂಭೃತ್, ಮಹೀಭೃತ್, ಮುನಿ, ಶಿಲೋಚ್ಚಯ, ಶೈಲ, ಸ್ವರ.
೮.	ಕುಂಜರ, ನಾಗ, ಗಜ, ಪನ್ನಗ, ಪ್ರಕೃತಿ, ಭುಜಗ, ಭುಜಂಗ, ಮತಂಗಜ, ವಸು.
೯.	ಅಂಕ, ಛಿದ್ರ, ನಂದ, ರಂಧ್ರ.
೧೦.	ಆಶಾ, ಕಕುಭ್, ದಿಕ್, ಪಂಕ್ತಿ.
೧೧.	ಭವ, ರುದ್ರ, ಶಿವ.
೧೨.	ಅರ್ಕ, ಇನ, ತಿಗ್ಮಾಂಶು, ನರ, ಭಾಸ್ಕರ, ರವಿ, ಸೂರ್ಯ.
೧೩.	ವಿಶ್ವ
೧೪.	ಮನು, ಸುರ, ಸುರಾಧಿಪ.
೧೫.	ತಿಥಿ, ದಿನ.
೧೬.	ಅಷ್ಟಿ.
೧೭.	ಧಾರ್ತವ, ಧೃತಿ, ಧೃತಿಕ.


ಸಂಖ್ಯೆ	ಪದಗಳು
೨೦.	ನಖ
೨೪.	ಜಿನ, ಸೂಕ್ಷ್ಮಕಾಃ.
೨೫.	ತತ್ತ್ವ
೨೭.	ಋಕ್ಷ, ನಕ್ಷತ್ರ, ಭ.
೩೦.	ತಿಥಿ
೩೨.	ದನ್ತ
೪೮.	ಸಂಸ್ಕಾರ

ಪಟ್ಟಿ – ೩




ಪಟ್ಟಿ – ೪

ಭಾರತೀಯ ಲಿಪಿಗಳ ವಿಕಾಸ (ಕನ್ನಡ–ತೆಲುಗು)




ಪಟ್ಟಿ – ೫

ಭಾರತೀಯ ಲಿಪಿಗಳ ವಿಕಾಸ (ಗ್ರಂಥ–ತಮಿಳು)




ಪಟ್ಟಿ – ೬

ಕ ಎಂಬ ಅಕ್ಷರದ ವಿಕಾಸ




ಪಟ್ಟಿ – ೭

ಗ ಎಂಬ ಅಕ್ಷರದ ವಿಕಾಸ




ಪಟ್ಟಿ – ೮

ಟ ಎಂಬ ಅಕ್ಷರದ ವಿಕಾಸ




ಪಟ್ಟಿ – ೯

ಮ ಎಂಬ ಅಕ್ಷರದ ವಿಕಾಸ




ಪಟ್ಟಿ – ೧೦

ಯ ಎಂಬ ಅಕ್ಷರದ ವಿಕಾಸ




ಪಟ್ಟಿ – ೧೧

ಲ ಎಂಬ ಅಕ್ಷರದ ವಿಕಾಸ




ಪಟ್ಟಿ – ೧೨

ವ ಎಂಬ ಅಕ್ಷರದ ವಿಕಾಸ




ಪಟ್ಟಿ – ೧೩

ಬ್ರಾಹ್ಮಿ ಹೊಸ ಲಿಪಿಯಲ್ಲಿ ಸ್ವರಗಳು




ಪಟ್ಟಿ – ೧೪

ವ್ಯಂಜನಗಳು ಮತ್ತು ಪ್ರಸ್ತಾಪಿತ ಹೊಸಲಿಪಿಯಲ್ಲಿ ಸ್ವರಾಂತ್ಯ ವ್ಯಂಜನಗಳು



ಪಟ್ಟಿ – ೧೫

ಪ್ರಸ್ತಾಪಿತ ಹೊಸಲಿಪಿಯಲ್ಲಿ ದೇವನಾಗರಿ ಲಿಪಿಯಲ್ಲಿರುವ ಒಂದು ಶ್ಲೋಕದ ಲಿಪ್ಯಂತರ



(ಮೂಲ ಶ್ಲೋಕ)

(ಪ್ರಸ್ತಾಪಿತ ಲಿಪಿಯಲ್ಲಿ)

(ಪ್ರಸ್ತಾಪಿತ ಲಿಪಿಯ ಕಂಪ್ಯೂಟರ್ ರೂಪ)

ಸಂಕೇತಗಳು

		ಕ್ರಿ. ಪೂ.(ಶತಮಾನ)
1.	ಮೌರ್ಯ	3
2.	ಭಟ್ಟಿಪ್ರೋಲು	3-2
3.	ತಮಿಳು ಗುಹೆಗಳು	3

ಕ್ರಿ. ಶ. (ಶತಮಾನ)

4.	ಕುಷಾಣ	2	31.	ಪಲ್ಲವ	7
5.	ಕ್ಷತ್ರಪ	2	32.	ಸೋಮವಂಶಿ	6-7
6.	ಶಾತವಾಹನ	2	33.	ರಾಷ್ಟ್ರಕೂಟ	9
7.	ಗುಪ್ತ	4	34.	ಪೂ. ಚಾಲುಕ್ಯ	10
8.	ಕದಂಬ	4-5	35.	ಪಲ್ಲವ	8
9.	ಇಕ್ಷ್ವಾಕು	3	36.	ಪಲ್ಲವ	8
10.	ಶಾಲಂಕಾಯನ	4	37.	ಪಲ್ಲವ	8
11.	ಪಲ್ಲವ	3-4	38.	ಪ. ಚಾಲುಕ್ಯ	11
12.	ಯಶೋಧರ್ಮ	6	39.	ಪೂ. ಚಾಲುಕ್ಯ	11
13.	ತ್ರೈಕೂಟಕ	6	40.	ಚೋಳ	11
14.	ವಾಕಾಟಕ	5	41.	ಹೊಯ್ಸಳ	12
15.	ಪ.ಗಂಗ	5-6	42.	ಕಾಕತೀಯ	12
16.	ನಳ	5	43.	ಪಾಂಡ್ಯ	13
17.	ವಿಷ್ಣುಕುಂಡಿ	6	44.	ಚೋಳ	13
18.	ಪಲ್ಲವ	5-6	45.	ರೆಡ್ಡಿ	14
19.	ನಾಗರೀ		46.	ವಿಜಯನಗರ	15
20.	ವರ್ಧನ	7	47.	ಪ್ರತೀಹಾರ	9
21.	ಪಲ್ಲವ	7	48.	ಪಾಲ	9
22.	ಮೈತ್ರಕ	6	49.	ಗು. ಚಾಲುಕ್ಯ	11
23.	ಕನ್ನಡ		50.	ಪರಮಾರ	11
24.	ತೆಲುಗು		51.	ಚಂದೇಲ	11-12
25.	ಗ್ರಂಥ		52.	ಸೇನ	12
26.	ತಮಿಳು		53.	ಯಾದವ	13
27.	ವಟ್ಟೆಳುತ್ತು		54.	ಪ. ಚಾಲುಕ್ಯ	11
28.	ಪ. ಚಾಲುಕ್ಯ	6	55.	ಗಾಹಡವಾಲ	
29.	ಪೂ. ಗಂಗ	7	56.	ಪೂರ್ವಗಂಗ	11
30.	ಪಲ್ಲವ	7	57.	ಪೂರ್ವಚಾಲುಕ್ಯ	7